ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2022

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444
ಸಂಪುಟ-22 ಸಂಚಿಕೆ-6 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಹೆಬ್ಬೂರು ಘನಪುರಿ ಸಂಸ್ಥಾನದ ಪೀಠಾಧಿಪತಿ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿ ಶಿವೈಕ್ಯ



ಹೆಬ್ಬೂರು ಘನಪುರೀ ಸಂಸ್ಥಾನ ಶ್ರೀ ಕೋದಂಡಾಶ್ರಮ ಮಠದ ಪೀಠಾಧಿಪತಿ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿ (90) ದಿನಾಂಕ 29.05.2022 ಭಾನುವಾರ ಬೆಳಿಗ್ಗೆ 10.30ಕ್ಕೆ ಬ್ರಹ್ಮೀಭೂತರಾದರು. ಸೋಮವಾರ ಬೆಳಿಗ್ಗೆ 10ಕ್ಕೆ ಶ್ರೀಮಠದ ಆವರಣದಲ್ಲಿ ಕ್ರಿಯಾಸಮಾಧಿ ನೆರವೇರಿತು. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕು ಅರ್ಬಿ ಗ್ರಾಮದ ದಿ. ಕುರಿಯ ನಾರಾಯಣಾಚಾರ್ಯರ ಚತುರ್ಥ ಪುತ್ರರಾಗಿ 1933ರ ಜುಲೈ 21 ರಂದು ಶ್ರೀಗಳು ಜನಿಸಿದ್ದರು. 13ನೇ ವಯಸ್ಸಿನಿಂದ 23ನೇ ವಯಸ್ಸಿನವರೆಗೆ ತಂದೆಯವರಿಂದ ಪೌರೋಹಿತ್ಯ ಅಭ್ಯಾಸ ಮಾಡಿದ್ದರು. ಪಂಡಿತಶ್ರೇಷ್ಠ ಶಂಭು ಶರ್ಮ ಅವರಲ್ಲಿ ಸಂಸ್ಕೃತ ಕಲಿತು ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ನಂತರ ಉಡುಪಿಯ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಸಾಹಿತ್ಯ ಶಿರೋಮಣಿಗಾಗಿ ಅಧ್ಯಯನ ಮಾಡಿ 1960ರಲ್ಲಿ ಉತ್ತೀರ್ಣರಾದರು. 2011ರಲ್ಲಿ ಧರ್ಮಪತ್ನಿ ನಿಧನರಾಗಿದ್ದು, ಇದರಿಂದ ವೈರಾಗ್ಯ ತಾಳಿ 2013ರಲ್ಲಿ ಶೃಂಗೇರಿಯಲ್ಲಿ ಜಗದ್ಗುರುಗಳ ಅನುಮತಿಯಂತೆ ಸನ್ಯಾಸ ಸ್ವೀಕರಿಸಿದರು. ಜಗದ್ಗುರುಗಳು ಮಾಧವಾಶ್ರಮ ಎಂಬ ಯೋಗಪಟ್ಟ ಅನುಗ್ರಹಿಸಿದರು. ಗುರುಗಳ ಆದೇಶದಂತೆ ಘನಪುರೀ ಸಂಸ್ಥಾನ ಹೆಬ್ಬೂರು ಶ್ರೀ ಕೋದಂಡಾಶ್ರಮ ಮಠ ಕಾಮಾಕ್ಷಿ ಶಾರದಾ ಪೀಠಾಧೀಶರಾಗಿ 2014ರ ಫೆ.9ರಂದು ಪೀಠಾರೋಹಣ ಮಾಡಿದ್ದರು.

## ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳು, ಪೀಠಾಧಿಪತಿಗಳು ಇವರ ಸಂಕ್ಷಿಪ್ತ ಪರಿಚಯ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಅರ್ಬಿ ಎಂಬ ಸ್ಥಳದಲ್ಲಿ ಕುರಯ ನಾರಾಯಣಾಚಾರ್ಯರೆಂಬ ಸ್ಥಾನಿಕ ಬ್ರಾಹ್ಮಣ ಸಮಾಜದ ಪ್ರಸಿದ್ಧ ಪುರೋಹಿತರಿದ್ದರು. ಇವರು ಸುಮಾರು ಐವತ್ತು ಪುರೋಹಿತರನ್ನು ಸಿದ್ಧಗೊಳಿಸಿದರು. ಪಾವಂಜೆ ಮೊದಲಾದ ಅನೇಕ ದೇವಸ್ಥಾನಗಳಲ್ಲಿ ದೇವತಾ ಪ್ರತಿಷ್ಠೆಗಳನ್ನೂ, ಬ್ರಹ್ಮಕಲಶಗಳನ್ನೂ ನೆರವೇರಿಸಿದರು. ಇವರ ಪ್ರಥಮ ಪುತ್ರ ಕುರಯ ರಾಮಕೃಷ್ಣ ಶಾಸ್ತ್ರಿಗಳು ಪ್ರಸಿದ್ಧ ಪುರೋಹಿತರಾಗಿದ್ದರು. ಇವರ ಚತುರ್ಥ ಪುತ್ರರೇ ಕುರಯ ಆತ್ಮರಾಮಶಾಸ್ತ್ರಿಗಳು. ತಾ.21.07.1933ರಲ್ಲಿ ಜನಿಸಿದ ಇವರು ತಮ್ಮ 13ನೇ ವಯಸ್ಸಿನಿಂದ 23ನೇ ವಯಸ್ಸಿನವರೆಗೆ ತಮ್ಮ ತಂದೆಯವರಿಂದ ಪೌರೋಹಿತ್ಯವನ್ನು ಅಧ್ಯಯನ ಮಾಡಿದರು. ಇದರ ಜೊತೆಯಲ್ಲಿ ಪುತ್ತೂರಿನಲ್ಲಿದ್ದ ಪಂಡಿತಶ್ರೇಷ್ಠ ಶಂಭು ಶರ್ಮರಲ್ಲಿ ಸಂಸ್ಕೃತವನ್ನು ಕಲಿತು ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಉಡುಪಿಯ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಸಾಹಿತ್ಯ ಶಿರೋಮಣಿಗಾಗಿ ಅಧ್ಯಯನ ಮಾಡಿ 1960ರಲ್ಲಿ ಉತ್ತೀರ್ಣರಾದರು. ಮುಂದೆ ಮುಂಬೈಯ ಭಾರತೀಯ ವಿದ್ಯಾಭವನದಲ್ಲಿ ವಾಚಸ್ಪತಿ ಉಪಾಧಿಗಾಗಿ ಪ್ರವೇಶವನ್ನು ಪಡೆದು ಕೇಂದ್ರ ಸರ್ಕಾರದ ವಿದ್ಯಾರ್ಥಿ ವೇತನದೊಂದಿಗೆ ಮೂರು ವರ್ಷ ಸಂಶೋಧನೆ ನಡೆಸಿ "ಸಾಹಿತ್ಯಶಾಸ್ತ್ರೇ ಅನ್ಯಶಾಸ್ತ್ರಾಣಾಂ ಪ್ರಭಾವಃ" ಎಂಬ ಪ್ರೌಢ ಪ್ರಬಂಧವನ್ನು ರಚಿಸಿ ವಾಚಸ್ಪತಿ ಉಪಾಧಿಯನ್ನು ಪಡೆದರು. ಮುಂದೆ ಭಾರತೀಯ ವಿದ್ಯಾಭವನದ ಮುಂಬಾದೇವಿ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ನಿಯುಕ್ತರಾದರು. ಈ ಸಮಯದಲ್ಲೇ ಭಾರತೀಯ ವಿದ್ಯಾಭವನವು ಪ್ರಾರಂಭಿಸಿದ 'ಸಂವಿದ್' ಎಂಬ ಸಂಸ್ಕೃತ ತ್ರೈಮಾಸಿಕದ ಸಹಾಯಕ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದರು. ಅಲ್ಲಿ 5 ವರ್ಷಗಳ ಸೇವೆಯ ಬಳಿಕ ನಿವೃತ್ತರಾಗಿ ಪುತ್ತೂರಿಗೆ ಮರಳಿದರು. ಮುಂದೆ ಸ್ವಲ್ಪ ಕಾಲ ಬೆಂಗಳೂರಿನಲ್ಲಿ 'ಜನಪ್ರಗತಿ' ಎಂಬ ವಾರಪತ್ರಿಕೆಯ ಉಪಸಂಪಾದಕರಾಗಿ ಕೆಲಸ ಮಾಡಿದರು. ಆ ವೃತ್ತಿಗೆ ರಾಜೀನಾಮೆಯನ್ನಿತ್ತು 1970ರಲ್ಲಿ ಬೆಂಗಳೂರಿನ ಬಿ.ಪಿ. ಇಂಡಿಯನ್ ಹೈಸ್ಕೂಲಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಸೇರಿ 22 ವರ್ಷಗಳ ಸೇವೆಯ ಬಳಿಕ 1993ರಲ್ಲಿ ನಿವೃತ್ತರಾದರು.

1997ರಲ್ಲಿ ಸುಳ್ಯ ತಾಲ್ಲೂಕಿನ ಅಜ್ಜಾವರದಲ್ಲಿ ಬಯಂಬು ಸಹೋದರರು (ಶ್ರೀ ಶಿವರಾವ್ ಮತ್ತು ಶ್ರೀ ಭಾಸ್ಕರರಾವ್) ಪ್ರಾರಂಭಿಸಿದ ಶಾರದಾರಾಮ ಸೇವಾ ಪ್ರತಿಷ್ಠಾನದ ಶಂಕರ ಭಾರತೀ ಪಾಠಶಾಲೆಯ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡರು. ಇಲ್ಲಿ ಹಲವಾರು ಪುರೋಹಿತರನ್ನು ಸಿದ್ಧಗೊಳಿಸಿದರು. ಅದೇ ಸಂದರ್ಭದಲ್ಲಿ ಅವರು ಉಡುಪಿಯ ಶ್ರೀಶಾರದಾ ಪತ್ರಿಕೆಯಲ್ಲಿ ಹಲವಾರು ಧಾರ್ಮಿಕ ಲೇಖನಗಳನ್ನು ಬರೆಯುತ್ತಿದ್ದರು. 2001ರಲ್ಲಿ ಬೆಂಗಳೂರಿನ ಕೊಡಿಗೇಹಳ್ಳಿಯಲ್ಲಿ ನಿರ್ಮಾಣವಾದ ದೇವಸ್ಥಾನದಲ್ಲಿ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಅಜ್ಜಾವರದಲ್ಲಿ ಹತ್ತು ವರ್ಷಗಳ ಸೇವೆಯ ಬಳಿಕ 2007ರಲ್ಲಿ ನಿವೃತ್ತರಾಗಿ ಬೆಂಗಳೂರಿಗೆ ಮರಳಿದರು.

2011ರಲ್ಲಿ ಇವರ ಧರ್ಮಪತ್ನಿಯವರು ನಿಧನರಾಗಲು ವೈರಾಗ್ಯತಾಳಿ 2013ರಲ್ಲಿ ಶೃಂಗೇರಿಯಲ್ಲಿ ಜಗದ್ಗುರುಗಳ ಅನುಮತಿಯಂತೆ ಸನ್ಯಾಸವನ್ನು ಸ್ವೀಕರಿಸಿದರು. ಜಗದ್ಗುರುಗಳು ಮಾಧವಾಶ್ರಮ ಎಂಬ ಯೋಗಪಟ್ಟವನ್ನು ಅನುಗ್ರಹಿಸಿದರು. ಗುರುಗಳ ಆದೇಶದಂತೆ ಘನಪುರೀ ಸಂಸ್ಥಾನ ಹೆಬ್ಬೂರು ಶ್ರೀ ಕೋದಂಡಾಶ್ರಮ ಮಠ ಶ್ರೀ ಕಾಮಾಕ್ಷೀ ಶ್ರೀ ಶಾರದಾ ಪೀಠಾಧೀಶರಾಗಿ ನಿಯುಕ್ತರಾಗಿ, ಶ್ರೀ ವಿಜಯ ಸಂವತ್ಸರದ ಮಾಘ ಶುಕ್ಲ ದಶಮೀ ಭಾನುವಾರ ದಿನಾಂಕ 09.02.2014 ಶುಭದಿನದಂದು ಶ್ರೀ ಶ್ರೀ ಸ್ವಾಮಿಗಳು ಪೀಠಾರೋಹಣ ಮಾಡಿದರು. ಶ್ರೀ ಮಠದ ಪರಂಪರೆಯನ್ನು ಮುಂದುವರಿಸುತ್ತಾ, ಶಿಷ್ಯಸಮುದಾಯವನ್ನು ವೃದ್ಧಿಸುತ್ತಾ, ಶ್ರೀ ಕಾಮಾಕ್ಷೀ, ಶಾರದಾಚಂದ್ರಮೌಳೀಶ್ವರ ಹಾಗೂ ಶ್ರೀ ಶಂಕರಭಗತ್ಪಾದರ ಕೃಪೆಯೊಂದಿಗೆ ಅದ್ವೈತ ತತ್ವ ಪ್ರಚಾರ ಮಾಡುತ್ತಾ ಸಮಾಜವನ್ನು ನಾಸ್ತಿಕತೆಯಿಂದ ಆಸ್ತಿಕತೆಗೆ ಮುನ್ನಡೆಸುತ್ತಿದ್ದರು. ಮಠಾಧಿಪತಿಗಳಾದ ಮೇಲೆ ಅನೇಕ ದೇವಸ್ಥಾನಗಳಲ್ಲಿ ಕುಂಭಾಭಿಷೇಕಗಳನ್ನು ನೆರವೇರಿಸಿದ್ದಾರೆ.

### ಆತ್ಮಾರಾಮಶಾಸ್ತ್ರಿಗಳು ಗಳಿಸಿರುವ ಉಪಾಧಿಗಳು:

1. ಸಾಹಿತ್ಯಶಿರೋಮಣಿ (ಮದ್ರಾಸ್ ವಿಶ್ವವಿದ್ಯಾಲಯ)
2. ವಾಚಸ್ಪತಿ (ಪಿ.ಎಚ್.ಡಿ) (ಭಾರತೀಯ ವಿದ್ಯಾಭವನ, ಮುಂಬಯಿ)
3. ಕನ್ನಡದಲ್ಲಿ ಬಿ.ಎ.(ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ)
4. ಸಂಸ್ಕೃತದಲ್ಲಿ ಎಂ.ಎ.(ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು)

### ಆತ್ಮಾರಾಮಶಾಸ್ತ್ರಿಗಳು ರಚಿಸಿದ ಕೃತಿಗಳು :

1. ತಲೇಕಿ ಶ್ರೀನಿವಾಸ ಸುಪ್ರಭಾತಮ್
2. ಕಡಬ ಗಣಪತಿ ಸುಪ್ರಭಾತಮ್
3. ಸೋಕ್ರಟೀಸ್ (ಆರ್.ಡಿ.ಕಾಮತರ ಕನ್ನಡ ನಾಟಕದ ಸಂಸ್ಕೃತರೂಪ)
4. ಸಂಸ್ಕಾರ ಸಂಗ್ರಹ ಭಾಗ – 1 (ಪೂರ್ವಷೋಡಶ)
5. ಸಂಸ್ಕಾರ ಸಂಗ್ರಹ ಭಾಗ – 2 (ಅಪರಷೋಡಶ)
   (ಈ ಎರಡೂ ಗ್ರಂಥಗಳ ಪ್ರಕಾಶಕರು ಶಾರದಾರಾಮ ಸೇವಾ ಪ್ರತಿಷ್ಠಾನ, ಬಯಂಬು)
6. ಅಪಶಬ್ದಕೋಶ (ಗಾಯತ್ರೀ ಪ್ರಕಾಶನ, ಕಬ್ಬಿನಾಲೆ)
7. ವಚನರಾಮಾಯಣ ರಚನೆ : ಶ್ರೀ ಶ್ರೀ ಮಾಧವಾಶ್ರಮಸ್ವಾಮಿಗಳು
   (ಕಾಮಾಕ್ಷೀ ಪ್ರಕಾಶನ, ಹೆಬ್ಬೂರು)

## ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ವತಿಯಿಂದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ

ದಿನಾಂಕ 12.06.2022ರಂದು ನಡೆದ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇದರ ಆಡಳಿತ ಮಂಡಳಿ ಸಭೆಯಲ್ಲಿ ಇತ್ತೀಚೆಗೆ ಶಿವೈಕ್ಯರಾದ ಹೆಬ್ಬೂರು ಘನಪುರೀ ಸಂಸ್ಥಾನದ ಪೀಠಾಧಿಪತಿ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಆ ಪ್ರಯುಕ್ತ ಸಂಘದ ಕಾರ್ಯದರ್ಶಿಗಳಾದ ಪ್ರಭಾಕರ ಭಂಡಿಯವರು ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದೊಂದಿಗೆ ಶ್ರೀಗಳ ಅವಿನಾಭಾವ ಸಂಬಂಧ, ಅವರ ಮಾರ್ಗದರ್ಶನ ಹಾಗೂ ಅವರು ತೋರಿದ ಪ್ರೀತ್ಯಾದರಗಳ ಗುಣಗಾನ ಮಾಡುತ್ತಾ ನುಡಿನಮನಗಳನ್ನು ಅರ್ಪಿಸಿದರು.



# ಪಡುಬಿದ್ರಿ : ಶ್ರೀ ಶಂಕರ ಜಯಂತ್ಯುತ್ಸವ ಆಚರಣೆ



ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಮತ್ತು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮಂಡಳಿಯ ಸಹಯೋಗದಲ್ಲಿ ಶ್ರೀ ವಿಷ್ಣುಮೂರ್ತಿ ದೇವರ ಬ್ರಹ್ಮಕಲಶೋತ್ಸವ ಮತ್ತು ಶ್ರೀ ಶಂಕರ ಜಯಂತ್ಯುತ್ಸವಗಳನ್ನು ಆಚರಿಸಲಾಯಿತು. ಕ್ಷೇತ್ರದ ತಂತ್ರಿವರೇಣ್ಯರಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ಶ್ರೀಯುತ ಹೆಜಮಾಡಿ ಕೃಷ್ಣರಾಜ ಭಟ್ ಇವರು ಶ್ರೀ ದೇವರಿಗೆ ಪವಮಾನ ಕಲಶಾಭಿಷೇಕವನ್ನು ನೆರವೇರಿಸಿದರು. ಬಳಿಕ ಸಂಘದ ಸದಸ್ಯೆಯರಿಂದ ಶಂಕರ ಅಷ್ಟೋತ್ತರ ಪಾರಾಯಣ ಮತ್ತು ಭಜನೆಯು ನಡೆಯಿತು. ಮಂಗಳಾರತಿಯ ಬಳಿಕ ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತರ ಮತ್ತು ಅರ್ಚಕರ ಪರಿಪಾಲನಾ ಸಮಿತಿ, ಮಂಗಳೂರು ಇದರ ಅಧ್ಯಕ್ಷರಾದ ಶ್ರೀಯುತ ಗುರುಪ್ರಸಾದ್ ಹೆಬ್ಬಾರ್, ಕಬ್ಬಿನಾಲೆ ಇವರು ಶಂಕರಾಚಾರ್ಯರ ತತ್ವಗಳ ಬಗ್ಗೆ, ಬ್ರಾಹ್ಮಣರ ಸಂಸ್ಕಾರ, ಸಂಪ್ರದಾಯಗಳ ಬಗ್ಗೆ ತಿಳಿಸಿ, ಇದನ್ನು ಉಳಿಸಲು ಮಾತೆಯರು ಮಾಡಬೇಕಾದ ಕ್ರಮಗಳ ಬಗ್ಗೆ ತಿಳಿಸಿದರು. ಬಳಿಕ ಶ್ರೀಯುತ ಗುರುಪ್ರಸಾದ್ ಹೆಬ್ಬಾರ್ ಇವರಿಗೆ ವಿದ್ವತ್ ಸನ್ಮಾನವು ನಡೆಯಿತು. ಈ ಕಾರ್ಯಕ್ರಮದಲ್ಲಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ. ಬಿ. ವಾಸುದೇವ ರಾವ್, ಅಧ್ಯಕ್ಷರಾದ ಶ್ರೀ ಮೋಹನ್ ರಾವ್, ಶ್ರೀ ಬಾಲಗಣಪತಿ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಪಿ.ಡಿ. ಶೇಖರ್ ರಾವ್ ಮತ್ತು ಸಂಘದ ನಿರ್ದೇಶಕರು ಉಪಸ್ಥಿತರಿದ್ದರು. ಬಳಿಕ ಅನ್ನಸಂತರ್ಪಣೆಯು ನಡೆಯಿತು.

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ| ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

## ಮೂಡಬಿದಿರೆ : ಶ್ರೀ ಶಂಕರ ಜಯಂತ್ಯುತ್ಸವ ಆಚರಣೆ



ದಿನಾಂಕ 15–5–2022ನೇ ರವಿವಾರ ಸಾಯಂಕಾಲ ಜಯರಾಮ ರಾಯರ ಮನೆಯಲ್ಲಿ ಶ್ರೀ ಶಂಕರ ಜಯಂತಿಯ ಆಚರಣೆಯ ಸಂದರ್ಭದಲ್ಲಿ ಶ್ರೀ ಆದಿಶಂಕರ ಮಹಿಳಾ ಭಜನಾ ಮಂಡಳಿಯ ಸದಸ್ಯೆಯರಿಂದ ಭಜನೆ ಹಾಗೂ ಶ್ರೀ ಶಂಕರ ತತ್ವದ ಮಹತ್ವದ ಬಗ್ಗೆ ಮುಖ್ಯ ಅಭ್ಯಾಗತರಾದ ಪತ್ರಕರ್ತರು ಹಾಗೂ ಹಿಂದಿ ಪ್ರಾಚಾರ್ಯರಾದ ಶ್ರೀ ರಾಯಿ ರಾಜಕುಮಾರರವರಿಂದ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಮತ್ತು ಅಧ್ಯಕ್ಷರಾದ ಎಂ.ದೇವಾನಂದ ಭಟ್ ಬೆಳುವಾಯಿ ಇವರು ಶ್ರೀ ಶಂಕರಾಚಾರ್ಯರ ಜೀವನಗಾಥೆಯನ್ನು ನೆನಪಿಸಿ ಅವರ ಅದ್ವೈತ ತತ್ವ ಸಿದ್ಧಾಂತಗಳನ್ನು ಅನುಸರಿಸಬೇಕೆಂದು ತಿಳಿಸಿದರು. ಬೊಕ್ಕಸ ಜಯರಾಮ ರಾವ್ ಸ್ವಾಗತಿಸಿದರು. ಕುಮಾರಿ ಮೇಘನಾ ರಾವ್ ಪ್ರಾರ್ಥನೆಗೈದರು. ಬೊಕ್ಕಸ ಸುರೇಶ ರಾವ್ ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಬೋಜ ರಾವ್ ಶಿರ್ತಾಡಿ ಧನ್ಯವಾದ ಸಮರ್ಪಣೆ ಮಾಡಿದರು. ರಾಯಿ ರಜತ್ ಕುಮಾರ್ ಕಾರ್ಯಕ್ರಮ ನಿರೂಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕರಿಸಿದ ಸಮಾಜಭಾಂದವರಿಗೆಲ್ಲರಿಗೂ ಧನ್ಯವಾದಗಳು.

**– ಅಧ್ಯಕ್ಷರು ಮತ್ತು ಸರ್ವಸದಸ್ಯರು, ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.), ಮೂಡುಬಿದಿರೆ.**



ಬ್ರಾಹ್ಮಣ ರಾಜ್ಯ ಮಹಾಸಭಾದ ಉಡುಪಿ ಜಿಲ್ಲಾ ಮಹಿಳಾ ಸಂಚಾಲಕಿಯಾಗಿ ಶ್ರೀಮತಿ ಶಾಂತಾ ಗಣೇಶ ರಾವ್ ಕುಂಭಾಶಿ ಅಯ್ಕೆಯಾಗಿದ್ದಾರೆ. ಅವರಿಗೆ ಅಭಿನಂದನೆಗಳು

## ಬಂಟ್ವಾಳ : ಶ್ರೀ ಶಂಕರ ಜಯಂತಿ ಆಚರಣೆ



ತಾ.09.05.2022 ಸೋಮವಾರದಂದು ಶ್ರೀಯುತ ಶಿವರಾಮರಾವ್ ನೆಟ್ಲ ಇವರ ಸತ್ಯದೇವತಾ ಅನುಗ್ರಹ ಮನೆ, ಬಲ್ಲೆ ಕೋಡಿ ಕಲ್ಲಡ್ಕದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದ ಸಂದರ್ಭದಲ್ಲಿ ಶ್ರೀ ಶಂಕರ ಭಗವತ್ಪಾದರ ಜಯಂತಿಯನ್ನು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಬಂಟ್ವಾಳ ವಲಯ – ವಿಟ್ಲದ ವತಿಯಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಶಂಕರ ಭಗವತ್ಪಾದರ ಕುರಿತಾದ ಪ್ರವಚನ ಹಾಗೂ ಶಂಕರ ಸ್ಮರಣೆ ಕಾರ್ಯಕ್ರಮವನ್ನು ಶ್ರೀಯುತ ಕೆಯ್ಯೂರು ನಾರಾಯಣ ಭಟ್‌ರವರು, ಭಗವತ್ಪಾದರ ಸಂದೇಶವನ್ನು ಸಮಾಜಕ್ಕೆ ಪ್ರಚುರ ಪಡಿಸುವ ನಿಟ್ಟಿನಲ್ಲಿ ಪ್ರವಚನವನ್ನು ನೀಡಿದರು. ದೀಪ ಪ್ರಜ್ವಲನೆಯನ್ನು ಮನೆಯೊಡತಿ ಶ್ರೀಮತಿ ಅರುಣಾ ಶಿವರಾಮರೊಂದಿಗೆ ಸುಮಂಗಲಿಯರು ನೆರವೇರಿಸಿದರು. ಶ್ರೀಮತಿ ಸ್ವಾತಿ ರಂಜಿತ್‌ರವರು ಪ್ರಾರ್ಥನೆ ನೆರವೇರಿಸಿದರು. ಅಧ್ಯಕ್ಷತೆಯನ್ನು ಸಭಾದ ಅಧ್ಯಕ್ಷರು ಆದ ಶ್ರೀಯುತ ಕೃಷ್ಣಶರ್ಮಾ ಅನಾರು ವಹಿಸಿದ್ದರು. ಕಾರ್ಯದರ್ಶಿ ಶ್ರೀಯುತ ಶ್ರೀಧರ ರಾವ್ ನೆಟ್ಲ ಸ್ವಾಗತಿಸಿದರು, ಹಾಗೂ ಧನ್ಯವಾದವನ್ನು ಶ್ರೀಯುತ ಭವಾನಿ ಶಂಕರರಾಯರು ನಿರ್ವಹಿಸಿದರು. ಶ್ರೀಯುತ ಸಂತೋಷ ಕಾವಳಕಟ್ಟೆ ಕಾರ್ಯಕ್ರಮ ಸಂಯೋಜಿಸಿದರು.

PRODUCTS ARE AVAILABLE AT ATTRACTIVE DISCOUNT PRICES



BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7,
Near KSRTC Bus Stand,
Udupi - 576101.
City Towers, Service Bus Stand,
Near Rao and Rao Circle, State Bank,
Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala



ಡಾ| ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು
Dr. Vijaya Rao Y.B.
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com
Indrani Maternity Clinic, Aisiri Complex,
Near Railway Station Bus Stop, Kunjibettu Post. Udupi - 576 102

## ಪ್ರತಿಭಾ ಪುರಸ್ಕಾರ



ಪ್ರತಿಭಾ ಪುರಸ್ಕಾರ "ಕಾರ್ಕಳ ಅನಂತಶಯನ ಶಾರದಾ ಮಹಿಳಾ ಮಂಡಳದ ವತಿಯಿಂದ 3-06-2022 ರಂದು ಕಾರ್ಕಳದ ಪೆರ್ವಾಜೆ ಪ್ರಾಥಮಿಕ ಶಾಲಾ ವಠಾರದಲ್ಲಿ ಪ್ರತಿಭಾ ಪುರಸ್ಕಾರ ನಡೆಯಿತು. ಶ್ರೀಮತಿಯುವರಾದ ಶುಭಾ ಕೆದಿಲಾಯ, ದೀಪಾ ನಾಯಕ್‌ರವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಮಂಡಲದ ಅಧ್ಯಕ್ಷೆ ಶ್ರೀಮತಿ ವಿನಯ ಪಾಠಕ್ ಎಲ್ಲರನ್ನು ಸ್ವಾಗತಿಸಿದರು. ಶ್ರೀಮತಿ ಕೆ.ಸುವಾಸಿನಿ ಪುಷ್ಪ ನೀಡಿ ಗೌರವಿಸಿದರು. ಪ್ರತಿಭಾ ಪುರಸ್ಕಾರದ ಬಗ್ಗೆ ಶ್ರೀಮತಿ ಕುಲಕರ್ಣಿ ಪ್ರಸ್ತಾವಿಕ ಭಾಷಣ ಮಾಡಿದರು. ಶ್ರೀಮತಿ ಊರ್ಮಿಳಾ ಶಿಂಧೆ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪರಿಚಯ ಮಾಡಿದರು. ಶ್ರೀಮತಿಯರಾದ ವಸಂತಿ ಕಡಂಬಳ ಮತ್ತು ಶುಭ ಕೆದಿಲಾಯ ಮಕ್ಕಳನ್ನು ಅಭಿನಂದಿಸಿದರು. ಪುರಸ್ಕಾರ ಪಡೆದ ಹತ್ತನೇ ತರಗತಿಯ ಅನಿಕೇತ್ ಶೆಟ್ಟಿ ಮತ್ತು ಏಳನೇ ತರಗತಿಯ ಕುಮಾರಿ ಅನ್ವಿತ ತಮ್ಮ ಅನುಭವಗಳನ್ನು ಹಂಚಿಕೊಂಡು ಮಂಡಳಿಯ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಕುಮಾರಿ ಅನ್ವಿತಾ ಮತ್ತು ಅನಿಕೇತ್ ಶೆಟ್ಟಿಯವರಿಗೆ ಮಂಡಳಿಯ ಪರವಾಗಿ ಪ್ರೋತ್ಸಾಹ ಧನವನ್ನು ಹಾಗೂ ಶ್ರೀಮತಿಯರಾದ ಸಾವಿತ್ರಿ ಮನೋಹರ್, ಊರ್ಮಿಳಾ ಶಿಂಧೆ ಹಾಗೂ ಉಮಾ ಚಿಪಳೂಣಕರ್ ನೀಡಿದ ಸ್ಮರಣಿಕೆ ಹಾಗೂ ಪುಸ್ತಕಗಳನ್ನು ವಿದ್ಯಾರ್ಥಿಗಳು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಿದರು. ಶ್ರೀಮತಿ ಸಾಧನ ಅವರ ಮಗ ಪ್ರತಿಭಾನ್ವಿತ ಆಶ್ರೀತ್‌ನನ್ನು ಗೌರವಿಸಲಾಯಿತು. ಪ್ರತಿಭಾ ಪುರಸ್ಕಾರದ ಬಗ್ಗೆ ಉಮಾ ಕುಲಕರ್ಣಿ ಭಾಷಣ ಮಾಡಿದರು. ಶ್ರೀಮತಿ ಸುಧಾ ಪ್ರಭು ನಿರ್ವಹಿಸಿದ ತಿಂಗಳ ಸ್ಪರ್ಧೆಯಲ್ಲಿ ಅದೃಷ್ಟವಂತ ಸದಸ್ಯೆಯಾಗಿ ಶ್ರೀಮತಿ ಸಾವಿತ್ರಿ ಮನೋಹರ್ ಬಹುಮಾನ ಸ್ವೀಕರಿಸಿದರು. ಕಾರ್ಯಕ್ರಮದ ಪ್ರಾಯೋಜಕರಾಗಿ ಧನಸಹಾಯ ಮಾಡಿದ ಶ್ರೀಮತಿಯರಾದ ಕಸ್ತೂರಿ ಕಾರಂತ್, ಶೈಲಜಾ ರತ್ನಾಕರ್, ಹರ್ಷ ಕಾಮತ್, ಐ.ಕೆ ಸುವಾಸಿನಿ, ರಮಿತಾ ಶೈಲೇಂದ್ರ, ಶುಭ ಕೆದಿಲಾಯ, ಪ್ರಭಾವತಿ ಐ.ಕೆ ಹಾಗೂ ಉಪಾಹಾರ ವ್ಯವಸ್ಥೆ ಮಾಡಿದ್ದ ಶ್ರೀಮತಿ ಸಾವಿತ್ರಿ ಮನೋಹರ್ ಅವರನ್ನು ಹೂ ನೀಡಿ ಗೌರವಿಸಲಾಯಿತು. ಗಂಗಾ ಬಳಗದ ಶ್ರೀಮತಿ ಸಾವಿತ್ರಿ ಮನೋಹರ್ ನಿರ್ವಹಿಸಿದ ಕಾರ್ಯಕ್ರಮದ ಕೊನೆಯಲ್ಲಿ ಕಾರ್ಯದರ್ಶಿ ಶ್ರೀಮತಿ ಐ.ಕೆ ಪ್ರಭಾವತಿ ಧನ್ಯವಾದ ಸಲ್ಲಿಸಿದರು.

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.16-07-2022 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.101/-)**

**ತಾ.12-07-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.18-06-2022 ಮತ್ತು ತಾ.04-07-2022 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಮಿಥುನ ಮಾಸದ ವಿಶೇಷ ದಿನಗಳು

| | | | |
|---|---|---|---|
| **15.06.2022** | ಗ್ರೀಷ್ಮಋತು ಜ್ಯೇಷ್ಠ ಮಾಸದ ಕೃಷ್ಣಪಕ್ಷಾರಂಭ ಮಿಥುನ ಸಂಕ್ರಮಣ | **10.07.2022** | ಸರ್ವೈಕಾದಶಿ, ಪ್ರಥಮೈಕಾದಶಿ |
| **17.06.2022** | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 10.11 | **13.07.2022** | ಹುಣ್ಣಿಮೆ, ಗುರು ಪೂರ್ಣಿಮ |
| **24.06.2022** | ಸರ್ವೈಕಾದಶಿ | **14.07.2022** | ಗ್ರೀಷ್ಮ ಋತು ಆಷಾಢ ಮಾಸದ ಕೃಷ್ಣಪಕ್ಷಾರಂಭ |
| **29.06.2022** | ಅಮಾವಾಸ್ಯೆ | **16.07.2022** | ಕರ್ಕಾಟಕ ಸಂಕ್ರಮಣ, ದಕ್ಷಿಣಾಯನ ಆರಂಭ ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.39 |
| **30.06.2022** | ಗ್ರೀಷ್ಮ ಋತು ಆಷಾಢ ಮಾಸದ ಶುಕ್ಲಪಕ್ಷಾರಂಭ | | |

## ಪುತ್ತೂರಿನ "ಶಿವಸದನ" ಹಿರಿಯ ನಾಗರಿಕರ ವಸತಿ ನಿಲಯಕ್ಕೆ ದೇಣಿಗೆ



ಮಂಗಳೂರು ನಗರಸಭಾ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದ ನಮ್ಮ ಸಮಾಜದ ಗಣ್ಯರಾದ ಶ್ರೀ ಐ.ಪಿ.ಕೆ. ಶರ್ಮಾರವರ ಸುಪುತ್ರಿ ಪ್ರೊಫೆಸರ್ ಐ.ಕೆ. ವಸುಂಧರಾ ಶರ್ಮಾ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ "ಶಿವಸದನ" ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 25,000 ದೇಣಿಗೆ ನೀಡಿದ್ದಾರೆ. ಹಾಗೂ ಶ್ರೀ ಸಭಾದಲ್ಲಿ ಈಗಾಗಲೇ ವಿದ್ಯಾನಿಧಿಯನ್ನು ಸ್ಥಾಪಿಸಿ ಸರ್ವರಿಗೂ ಮಾದರಿಯಾಗಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕರಾದ ಶ್ರೀ ಸಂತೋಷ್. ಯು, ಶ್ರೀ ರಘವೀರ್ ಪೆರ್ಡೂರು ಉಪಸ್ಥಿತರಿದ್ದರು. "ಶಿವ ಸದನ" ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ಸಸ್ಯಹಾರಿ ವಸತಿ ನಿಲಯದಲ್ಲಿ ಈಗಾಗಲೆ 34 ಕ್ಕೂ ಹೆಚ್ಚು ನಿವಾಸಿಗಳಿದ್ದು ಮಿತ ದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ. ಸಂಪರ್ಕಿಸಿ: ಶ್ರೀ ಕರುಣ್ ರಾವ್ ಬೆಳ್ಳೆ ಮೊ: 7337634359. ಪಿ.ಶ್ರೀಕಾಂತ್ ರಾವ್ ಮೊ : 7795116598.

## ಕಾರ್ಕಳ ಶ್ರೀ ಶಂಕರ ಪ್ರತಿಷ್ಠಾನದ ವತಿಯಿಂದ "ಶ್ರೀ ಶಂಕರ ಜಯಂತಿ"



ತಾ.15-05-2022 ರಂದು ಆದಿತ್ಯವಾರ ಮಧ್ಯಾಹ್ನ ಕಾರ್ಕಳದ ಶ್ರೀ ಶಂಕರ ಪ್ರತಿಷ್ಠಾನದ ವತಿಯಿಂದ "ಶ್ರೀ ಶಂಕರ ಜಯಂತಿ" ಆಚರಣೆಯು ಮುನ್ಸಿಪ್ ಕೋರ್ಟಿನ ಪಕ್ಕದಲ್ಲಿರುವ ಶ್ರೀಮತಿ ಮತ್ತು ಶ್ರೀ ಸಾವಿತ್ರಿ ಮನೋಹರ ರಾವ್‌ರವರ ಮನೆಯಲ್ಲಿ ನೆರವೇರಿತು. ಡಾ.ಯಾಜಿ ನಿರಂಜನ ಭಟ್‌ರವರು ಸಕಲ ಪೂಜಾ ವಿಧಿ ವಿಧಾನಗಳೊಂದಿಗೆ ಶಂಕರ ಜಯಂತಿಯ ಆಚರಣೆಯನ್ನು ನೆರವೇರಿಸಿಕೊಟ್ಟರು. ಈ ಸಮಯದಲ್ಲಿ ಶಂಕರ ಪ್ರತಿಷ್ಠಾನದ ಮಹಿಳಾ ಭಜನಾ ತಂಡದವರು ಭಜನಾ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ಈ ಸಮಯದಲ್ಲಿ ಶಂಕರ ಪ್ರತಿಷ್ಠಾನದ ಅಧ್ಯಕ್ಷರಾದ ಮಾನ್ಯ ಕೇಶವ ರಾವ್, ಮಹಿಳಾ ಅಧ್ಯಕ್ಷೆ ಶ್ರೀಮತಿ ವಿದ್ಯಾವತಿ ರಾವ್ ಬೈಲೂರು ಹಾಗೂ ಸಂಘದ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರು ಹಾಜರಿದ್ದು ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾದರು. ಪೂಜೆಯ ಬಳಿಕ ಯಾಜಿ. ಡಾ.ನಿರಂಜನ ಭಟ್‌ರವರು ಶಂಕರ ಜಯಂತಿಯ ಆಚರಣೆಯ ಬಗ್ಗೆ ಮಾತನಾಡಿದರು. ಅಂದಿನ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರಿಗೂ ಉಪಹಾರದ ವ್ಯವಸ್ಥೆಯನ್ನು ಶ್ರೀಮತಿ ಮತ್ತು ಶ್ರೀ ಸಾವಿತ್ರಿ ಮನೋಹರ ರಾವ್ ಹಾಗೂ ಅವರ ಮನೆಯವರು ಮಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಹರಿಶ್ಚಂದ್ರ ರಾವ್ ಕರ್ವಾಲು ಇವರು ಆಗಮಿಸಿ ಧನ್ಯವಾದ ನೀಡಿದರು.

Ph : 98459 92859

Ganesh Hebbar & Associates
CHARTERED ACCOUNTANT

S.M.S.P. Complex, Udupi - 576 101.

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣ ರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು

## ಶುಭ ವಿವಾಹ

ಶ್ರೀಮತಿ ಗಾಯತ್ರಿ ಮತ್ತು ಶ್ರೀ ಮಡಿಯಾಲ ಬಾಲಕೃಷ್ಣ ರಾವ್ ಅವರ ಪುತ್ರ **ಚಿ. ಅತುಲ** ಹಾಗೂ ಶ್ರೀಮತಿ ಆಶಾ ಮತ್ತು ಯು.ಅರವಿಂದ ಕುಮಾರ್ ಅವರ ಪುತ್ರಿ **ಚಿ.ಸೌ. ಅನುಶ್ರೀ** ಇವರ ವಿವಾಹವು ತಾ. 20.05.2022 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀ ಶಂಭು ಶಂಕರ ರಾವ್ ಮತ್ತು ಶ್ರೀಮತಿ ಪ್ರಭಾ ಇವರ ಪುತ್ರಿ **ಚಿ.ಸೌ. ವಿನುತೆ** ಮತ್ತು ಶ್ರೀ ದಿ.ಪೊಳಲಿ ನಾರಾಯಣ ರಾವ್ ಮತ್ತು ಶ್ರೀಮತಿ ಕಮಲಾಕ್ಷಿ ಇವರ ಪುತ್ರ **ಚಿ. ಶ್ರೀನಿವಾಸ್** ಇವರ ವಿವಾಹವು ತಾ. 12.05.2022 ರಂದು ಜಯರಾವ್ ಪುರಾಣಿಕ್ ಅವರ ಮನೆಯಲ್ಲಿ ಜರಗಿತು.

### ಎಸ್‌ಎಸ್‌ಎಲ್‌ಸಿ ಸಾಧಕರು



**ಬೆಂಗಳೂರಿನಲ್ಲಿರುವ ಶ್ರೀ ನಿತಿನ್ ಹಾಗೂ ಅಕ್ಷತಾ ದಂಪತಿಗಳ ಪುತ್ರಿ “ಅವನಿ” ಈ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 625/625 ಅಂಕ ಪಡೆದಿರು ತ್ತಾಳೆ. ಅಲೆವೂರು ದೇವರಾಯಶಾಸ್ತ್ರಿ ಮತ್ತು ಎರ್ಮಾಳು ಶ್ರೀಪತಿರಾಯರ ಮೊಮ್ಮಗಳ ಈ ಸಾಧನೆಗೆ ಶ್ರೀ ಶಾರದಾ ಅಭಿನಂದನೆ.**



**ದಿ. ಕಿಗ್ಗಾ ಅರುಣ್ ಕುಮಾರ್ ಮತ್ತು ಶ್ರೀಮತಿ ಮಾನಸಾ ಅರುಣ್‌ರವರ ಪುತ್ರ ಹರ್ಷಿತ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 94% ಪಡೆದು ಉತ್ತೀರ್ಣರಾಗಿದ್ದಾನೆ. ಇವರಿಗೆ ಶ್ರೀ ಶಾರದಾ ಅಭಿನಂದನೆಗಳು.**

ಶ್ರೀ ಗುರುಪ್ರಸಾದ್ ಮತ್ತು ಶ್ರೀಮತಿ ಮಮತಾ ಇವರ ಪುತ್ರ **ಚಿ.ರಾ ಹರ್ಷದ್** ಮತ್ತು ಶ್ರೀ ಮಾಧವ ರಾವ್ ಮತ್ತು ಶ್ರೀಮತಿ ಸುಧಾಮಣಿ ಇವರ ಪುತ್ರಿ **ಚಿ.ಸೌ. ಅಪೇಕ್ಷಾ** ಇವರ ವಿವಾಹವು 06.06.2022ರಂದು ಧಾರವಾಡದ ಸುಬ್ರಹ್ಮಣ್ಯ ಭವನದಲ್ಲಿ ಜರಗಿತು.

★★★★ ★★★★

ಶ್ರೀ ಸರ್ವೋತ್ತಮ ರಾವ್ ಮತ್ತು ಶ್ರೀಮತಿ ಉಮಾ ಎಸ್ ರಾವ್ ಇವರೆ ಪುತ್ರ **ಚಿ. ಚೇತನ್ ರಾವ್ ಯು.** ಮತ್ತು ಶ್ರೀ ಪಿ. ಮೋಹನ್ ರಾವ್ ಮತ್ತು ಶ್ರೀಮತಿ ಯಶೋಧಾ ಇವರ ಪುತ್ರಿ **ಚಿ.ಸೌ. ಮೃಣಾಲಿನಿ ರಾವ್** ಇವರ ವಿವಾಹವು ತಾ. 06.06.2022ರಂದು ಉಡುಪಿ ಕೊಡವೂರಿನ ‘ವಿಪ್ರಶ್ರೀ ಕಲಾ ಭವನ’ದಲ್ಲಿ (ಬ್ರಾಹ್ಮಣ ಮಹಾಸಭಾ, ಶಂಕರ ನಾರಾಯಣ ದೇವಸ್ಥಾನದ ಬಳಿ) ಜರಗಿತು.

★★★★ ★★★★

ಶ್ರೀ ರವಿಕುಮಾರ್ ಕಾರ್ನಾಡು ಮತ್ತು ಶ್ರೀಮತಿ ನಿರ್ಮಲಾ ಇವರ ಪುತ್ರಿ **ಚಿ.ಸೌ. ನಮ್ರತಾ** ಮತ್ತು ಶ್ರೀ ಶ್ರೀನಿವಾಸ ಮತ್ತು ಶ್ರೀಮತಿ ಅನುಪಮಾ ಇವರ ಪುತ್ರ **ಚಿ.ಅಮಿತ್** ಇವರ ವಿವಾಹವು ತಾ.20.5.2022ರಂದು ಮುಲ್ಕಿ ಕಾರ್ನಾಡು ಶ್ರೀ ಹರಿಹರ ಕ್ಷೇತ್ರದಲ್ಲಿರುವ “ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಸಭಾಂಗಣ” ದಲ್ಲಿ ಜರಗಿತು.

★★★★ ★★★★

ಬಾರ್ಕೂರು ಮಸ್ಕೆಬೈಲ್ ಶ್ರೀಧರ್ ರಾವ್ ಮತ್ತು ಶ್ರೀಮತಿ ಜಯಶ್ರೀ ಇವರ ಪುತ್ರ **ಚಿ. ಮಂಜುನಾಥ್** ಹಾಗೂ ಡಾ। ಸಂತೋಷ್ ಕುಮಾರ್ ಮತ್ತು ಡಾ। ಗೀತಾ ಸಂತೋಷ್ ಕುಮಾರ್ ಇವರ ಪುತ್ರಿ **ಚಿ.ಸೌ. ಶುಭ** ಇವರ ವಿವಾಹವು ತಾ. 08.06.2022 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀಮತಿ ಡಾ। ಅಮಿತಾ ಶೋಭಾ ರಾವ್ ಮತ್ತು ಶ್ರೀ ಕೆ. ಚಂದ್ರಶೇಖರ್ ರಾವ್ ಮಣಿಪಾಲ ಇವರ ಪುತ್ರ **ಚಿ. ಆಕಾಶ್** ಹಾಗೂ ಶ್ರೀಮತಿ ಮೀನಾ ಮತ್ತು ಶ್ರೀ ಕೈಲಾಶ್ ಮುಂಬೈ ಅವರ ಪುತ್ರಿ **ಚಿ.ಸೌ. ನಿಶಾ** ಇವರ ವಿವಾಹವು ತಾ. 10.06.2022 ರಂದು ಅಂಬಾಗಿಲು ಅಮೃತ ಗಾರ್ಡನ್ ನಲ್ಲಿ ಜರಗಿತು.

★★★★ ★★★★

ಶ್ರೀ ಕುಮಾರಸ್ವಾಮಿ ಕೋಲ್ಲೆ ಮತ್ತು ಶ್ರೀಮತಿ ಕಲಾವತಿ ಇವರ ಪುತ್ರ **ಚಿ.ವಿನೋದ್ ಕುಮಾರ್** ಮತ್ತು ಶ್ರೀ ಯು.ಶಶಿಕಾಂತ್ ರಾವ್ ಹಿರಿಯಡ್ಕ ಮತ್ತು ಶ್ರೀಮತಿ ಚಂದ್ರಮಣಿ ಇವರ ಪುತ್ರಿ **ಚಿ.ಸೌ. ಅನುಷಾ ರಾವ್** ಇವರ ವಿವಾಹವು ತಾ.10.06.2022ರಂದು ಉಡುಪಿ ಶ್ರೀ ಶಾರದಾ ಮಂಟಪ ಕುಂಜಿಬೆಟ್ಟುವಿನಲ್ಲಿ ಜರಗಿತು.

## ಬ್ರಹ್ಮೋಪದೇಶ

### ಚಿ। ಪ್ರತ್ಯುಷ್

ಶ್ರೀಮತಿ ಅಕ್ಷತಾ ಮತ್ತು ಶ್ರೀ ಗೌರೀಶ್ ಮಾರ್ಪಳ್ಳಿ ಅವರ ಪುತ್ರ ಚಿ. ಪ್ರತ್ಯುಷ್‌ನ ಬ್ರಹ್ಮೋಪದೇಶವು ತಾ.06.05.2022ರಂದು ಬೆಂಗಳೂರಿನ ಕೊಡಿಗೇಹಳ್ಳಿಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಯಾಗಶಾಲೆಯಲ್ಲಿ ಜರಗಿತು.

★★★★ ★★★★

### ಚಿ। ಪ್ರಖ್ಯಾತ್

ಶ್ರೀಮತಿ ಸಂಧ್ಯಾ ಮತ್ತು ಶ್ರೀ ಗಣೇಶ್ ರಾವ್ ಪೆರ್ಡೂರು ಅವರ ಪುತ್ರ ಚಿ. ಪ್ರಖ್ಯಾತ್‌ನ ಬ್ರಹ್ಮೋಪದೇಶವು ತಾ.13.05.2022ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ಜರಗಿತು.

★★★★ ★★★★

### ಚಿ। ಅಶುತೋಷ್

ಶ್ರೀಮತಿ ಪ್ರಶಾಂತಿ ಮತ್ತು ಶ್ರೀ ಆನಂದ ಕುಮಾರ್ ಅವರ ಪುತ್ರ ಚಿ. ಅಶುತೋಷ್ ಕುಮಾರ್ ನ ಬ್ರಹ್ಮೋಪದೇಶವು ತಾ.13.05.2022ರಂದು ಮೈಸೂರಿನ ಶ್ರೀ ಜ್ಞಾನಶಕ್ತಿ ಪ್ರಾರ್ಥನಾ ಮಂದಿರದಲ್ಲಿ ಜರಗಿತು.

★★★★ ★★★★

### ಚಿ। ನೀಲ್ ರಾವ್

ಶ್ರೀಮತಿ ಸ್ಮಿತಾ ರಾವ್ ಮತ್ತು ಶ್ರೀ ಮನೋಹರ್ ರಾವ್ ಅವರ ಪುತ್ರ ಚಿ. ನೀಲ್ ರಾವ್‌ನ ಬ್ರಹ್ಮೋಪದೇಶವು ತಾ. 13.05.2022ರಂದು ನವಗಿರಿ ಕಲ್ಯಾಣ ಮಂಟಪ, ಸುರತ್ಕಲ್‌ನಲ್ಲಿ ಜರಗಿತು.

★★★★ ★★★★

### ಚಿ। ಅರವಿಂದ

ಶ್ರೀಮತಿ ರೂಪಶ್ರೀ ಮತ್ತು ಶ್ರೀ ಮಧುಸೂದನ ರಾವ್ ಅವರ ಪುತ್ರ ಚಿ. ಅರವಿಂದನ ಬ್ರಹ್ಮೋಪದೇಶವು ತಾ. 25.05.2022ರಂದು ಶ್ರೀ ಸುಬ್ರಹ್ಮಣ್ಯ ಸಭಾ ಭವನ ಬೆಳ್ತಂಗಡಿಯಲ್ಲಿ ಜರಗಿತು.

## ನಿಧನ



ಶ್ರೀ ಉಜ್ಜೋಡಿ ಶೇಷಾದ್ರಿ ರಾವ್ ಅವರು ತಮ್ಮ 78ನೇ ವಯಸ್ಸಿನಲ್ಲಿ ತಾ.21.05.2022 ರಂದು ಮಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

★★★★ ★★★★



ಶ್ರೀ ರಾಮರಾವ್ ಪಡುಬಿದ್ರಿಯವರು ತಮ್ಮ 78ನೇ ವಯಸ್ಸಿನಲ್ಲಿ ತಾ.25.05.2022 ರಂದು ಉಡುಪಿಯಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

★★★★ ★★★★



ಬೆಂಗಳೂರಿನ ದಿ. ಪ್ರಕಾಶ್ ಮೆರ್ಟಾ ಅವರ ಪತ್ನಿ ಅನ್ನಪೂರ್ಣ ಮೆರ್ಟಾ ತಮ್ಮ 69ನೇ ವಯಸ್ಸಿನಲ್ಲಿ ನಿಧನರಾದರು. ಉಡುಪಿ ದಿ। ಪ್ರಫುಲ್ಲಚಂದ್ರ ರಾಯರ ಸಹೋದರಿಯಾದ ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

★★★★ ★★★★



ಸುರತ್ಕಲ್ ಇಂಜಿಯರಿಂಗ್ ಕಾಲೇಜಿನ ನಿವೃತ್ತ ಪ್ರೊಫೆಸರ್ ಶ್ರೀ ಪಾದೆಬೆಟ್ಟು ದೇವರಾವ್ ಅವರು ತಮ್ಮ 94 ನೇ ವಯಸ್ಸಿನಲ್ಲಿ ತಾ. 05.06.2022 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ. ಇವರು ಸ್ಥಾನಿಕ ಸಮಾಜದ ಬಗ್ಗೆ ಅಧ್ಯಯನ ಮಾಡಿ ಪುಸ್ತಕಗಳನ್ನು ಬರೆದಿರುತ್ತಾರೆ.

★★★★ ★★★★



ದಿಲ್ಲಿ ದಿ। ಶ್ರೀ ಚಾರ್ಮಾಡಿ ಕೌಳಿಗೆ ಶ್ರೀನಿವಾಸ ರಾವ್ ಅವರ ಪತ್ನಿ ಮಾಲತಿ ರಾವ್ (74), ದಿಲ್ಲಿಯಲ್ಲಿ ತಾ.09.06.2022 ರಂದು ನಿಧನರಾದರು. ಇವರು ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.




ಎಮ್. ದೇವಾನಂದ್ ಭಟ್ Cell : 9845644556

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ. ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್ PFM
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೋಟೆಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue



Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

# ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯರವರ ವ್ಯಕ್ತಿ ಪರಿಚಯ

**(ಕಳೆದ ಸಂಚಿಕೆಯಿಂದ ಮುಂದುವರಿದುದು)**

ಸೂಕ್ಷ್ಮಗ್ರಾಹಿಗಳಾದ ಹರಿದಾಸರ ಆಂತರ್ಯವನ್ನು ಬಲ್ಲವರಾದ ಹೆಗ್ಡೆಯವರು ಈ ಪದ್ಯವನ್ನು ಕೇಳಿ ಇದು ತನ್ನನ್ನೇ ಕುರಿತು ದಾಸರು ತನ್ನ ಕಿವಿ ಹಿಂಡಿದ ಹಾಡು ಎಂದರಿತು ಕೂಡಲೇ ಉಪ್ಪರಿಗೆಯಿಂದ ದಡ ದಡನೇ ಕೆಳಗಿಳಿದು ಹರಿದಾಸರ ಮುಂದೆ ತನಗಾಗಿ ಕಾದಿರಿಸಿದ್ದ ಆಸನದಲ್ಲಿ ಆಸೀನರಾದರು. ತಡವಾಗಿ ಬಂದು ಸಭಾ ಸಂಪ್ರದಾಯುವನ್ನು ಮುರಿದು ತಾನು ಮಾಡಿದ ಅಪಚಾರವನ್ನು ಮನ್ನಿಸಬೇಕೆಂಬ ಭಾವದಿಂದ ಮುದುಡಿ ಕೂತ ಹೆಗ್ಡೆಯವರ ಪ್ರಸಂಗಾವಧಾನವನ್ನು ಮೆಚ್ಚಿದ ಹರಿದಾಸರು ಹಾಡನ್ನು ಹೀಗೆ ಮುಂದುವರಿಸುತ್ತಾರೆ –

*ಸಾಮಾನ್ಯನಲ್ಲ ನೀ ಮಂಗ ರಘು–।*
*ರಾಮಪಾದಾರವಿಂದ ಸದ್ಭಂಗ ॥*
*ತಾಮಸವಡರಿತು ಕ್ಷಣಕ್ಕೆ ತಾ–।*
*ರಾಮದೂತನೆಂದು ಹೊಳೆಯಿತು ಮನಕೆ ॥ ಅಟ್ಟ ॥*
*ರಾಮ ರಾಮ ಎಂದು ನೆನೆಯುತ ಮನದೊಳು ।*
*ರಾಮ ಕಾರ್ಯೋನ್ಮುಖನಾದನೆ ಮುದದೊಳ್ ।*
*ಭೀಮ ಪರಾಕ್ರಮಿ ಲಕ್ಷ್ಮೀನಾರಾಯಣ ಪ್ರೇಮಿ ।*
*ನಾಮಾಂಕಿತನಂಗದ ತಾ ಸದ್ಧರ್ಮಿ ॥ ಅಟ್ಟ ॥*

– ಎಂದು ಹಾಡಿ ಕಥೆ ಮುಂದುವರಿಸಿದರು.

ಒಮ್ಮೆ ಹರಿದಾಸರು ಮೂಲ್ಕಿಯಿಂದ ಇನ್ನ ಎಂಬ ಹಳ್ಳಿಗೆ ನಡೆದು ಹೋಗುತ್ತಿರುವಾಗ ಪಲಿಮಾರಿನ ಬಳಿ ಕೆಲವು ಮುಸ್ಲಿಮರು ಸೇರಿ ತಮ್ಮವರ ಮೇಲೆ ಒಂದು ಹಾಡು ರಚಿಸಿ ಹೇಳಬೇಕೆಂದು ಬಲವಂತ ಮಾಡಿದರು. ದಾಸರ ಬಾಯಲ್ಲಿ ಹಾಡೊಂದು ಚಿಮ್ಮಿತು.

*ತುರುಕರಿದ್ದರೆ ಊರು ಸ್ವರ್ಗ । ಆಹಾ ।*
*ತುರುಕರಿಲ್ಲದ ಊರು ನರಕ ॥*
*ತುರುಕರುಗಳ ಕಂಡು ಹರಿಹಾಯ ಬೇಡಿ ।*
*ಕರೆದು ಗ್ರಾಸವನ್ನಿತ್ತು ಉಪಚಾರ ಮಾಡಿ ।*
*ತುರುಕರ ಹಿಂಸೆ ಮಾಡಿ –।*
*ದರೆ ಹರಿಮುನಿಯುವ ನಿಮ್ಮ ನೋಡಿ ।*
*ತುರುಕರುಗಳ ಸೇವಾಸಕ್ತ ।*
*ಪರತರಕೆ ಮಾಡುವ ಪುರುಷಾರ್ಥ ॥*
*ತುರು ತುರು ಎಂದು ಕೊಳಲುನೂದುತ್ತಾ ಬಂದ।*
*ತುರಕರೊಡೆಯ ಲಕ್ಷ್ಮೀನಾರಾಯಣ ಗೋವಿಂದ॥*

ಎಂಬ ದ್ವಂದ್ವಾರ್ಥದ (ತುರುಕರೆಂದರೆ ಮುಸ್ಲಿಮರೂ ಹೌದು ದನಗಳೂ ಹೌದು) ಹಾಡನ್ನು ಹಾಡಿ ಅವರನ್ನು ಸಂತೋಷಪಡಿಸಿ ಬೀಳ್ಕೊಟ್ಟರು. (ಖ್ಯಾತ ಹರಿದಾಸ– ಆಶುಕವಿ, ಪಾವಂಜೆ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯ'. ಕಾಂತಾವರ ಕನ್ನಡ ಸಂಘ. 2018 – ಪುಸ್ತಕದಿಂದ)

**ದೂರುವ ಹಾಡುಗಳು!**

ಸಮಾಜ ಬಾಂಧವರೊಂದಿಗೆ ಸಂಸಾರಿಯಾಗಿರುವಾಗ ಹರಿದಾಸರು ಕಟ್ಟಿದ ನೂರಾರು ಭಜನೆಗಳು, ತುಳು ಹಾಡುಗಳು, ಶೋಭಾನೆ ಹಾಡು, ಜೋಗುಳ ಹಾಡು, ಮದುವೆ ಮನೆಯಲ್ಲಿ ದೂರುವ ಹಾಡುಗಳು ಜನಜನಿತವಾಗಿವೆ. ಒಂದು ದೂರುವ ಹಾಡು

*ಅತ್ತಿಗೆ ಈ ಹೊತ್ತಿನವತಣ । ಉಂಡುಂಡು ಬೇ*
*ಸತ್ತುದೆಲ್ಲ ಕೂಡಿದ ಜನ*
*ಎತ್ತು ತಿನ್ನುವನ್ನ ಹುಳಿ*
*ಸತ್ವವಿಲ್ಲದಂಥ ಪಲ್ಯ*
*ಪಥ್ಯದೊಂದು ಸಾರು ಸಾಲದೆ ಸಾಕು ನಾ ದಣಿದೆ ॥ ೧ ॥*

ಇನ್ನು ಅನೇಕ ತುಳು ಹಾಡುಗಳ ಪೈಕಿ ಈ ಕೆಳಗಿನ ಹಾಡು ತುಂಬ ಪ್ರಚಲಿತ –

**–ಡಾ.ಬಿ ಜನಾರ್ದನ ಭಟ್**

*ನೀರಜಾಮುಖಿ । ನೀರೋಂಡು ಕೊಳುಜೆ ॥ಪಲ್ಲ॥*
*ನೀರಜಾಮುಖಿ ನೀರೋಂಡು । ಇನ್ನೊ ।*
*ಭಾರಿ ಸಂಭ್ರಮ ಬಜಿ ಬಂಡ್ । ಆಹಾ ।*
*ಸೀರೆದ ಸೆರಗ್ಗ್ ವಾರೆ ಅಂತ್ತ್ ಕಿಂಞ ।*
*ಮೋರೆಡ್ ಎದುರುಡ್ ಪಾರ್ ಪೋಪುಣೊ ಪಾಪು॥ಅನು॥*
*ಕಜಿಪು ಗಿಜಿಪು ಜಾನೆ ಪಣ್ಕೆ । ಅರೆ–।*
*ಪಜಿಯಂತ್ಥಳಾತ್ ಸರಿಕೆ । ಬಾಯಿಡ್ ।*
*ಬಜಿ ಡಬ್ಬು ಪಾತೆರ ನಿಲ್ಕೆ । ಆಹಾ ।*
*ಯಜಮಾನ್ತಿ ಮೋರೇನ್ ಸಜಪೋಡು ಪೋಣ್ಜೋವೆ*
*ನಜರಿದ್ದಿ ಈ ಇನ್ನೊ ಮೆಜಿಕ್ಕ್ ಸೋಜೋತ ॥೧॥*
*ಸಾರ್ ಅಂತ್ಡಿ ಸೌಭಾಗ್ಯ । ನನ ।*
*ಏರೆಡ ಪಣ್ಕೆ ವೈರಾಗ್ಯ । ತೇಕೆ ।*
*ಬಾರ್ ಉಡಿಗಿರೆಗುಂದು ಯೋಗ್ಯ । ಆಹಾ ।*
*ಬಾರಿ ಭೋಜನ ಪುಳಿ ಸಾರ್ಡ್ ತೀರ್ನ್ ।*
*ಕೇರಿಗ್ ಈ ಒರ್ತಿ ಬಜಾರಿ ಇತ್ತ್ಂಡ ಪಾಪು॥೨॥*
*ಪಾಪು ಪರಮಾನ್ನಂತೊ ಸುದ್ದಿ । ಬೆಲ್ಲ ।*
*ಸೂಪೋತ್ನ ಮಾತ್ರ ಬೆತ್ತಿದ್ದಿ । ಜಾಲ ।*
*ತೀಪೆದೊ ಬಾಬೇ ಇದ್ದಿ । ಆಹಾ ।*
*ಸೂಪೋಲ ಮೋರೆನ್ ಏ ಪಾಪಿ ಅತ್ತಿಗೆ ।*
*ಕೋಪ ಅಂಪಡ ಇನ್ನೊ ಸುರ್ಪನ್ ಮಾರಿಯ॥೩॥*
*ಗುಣು ಗುಣು ಒಳೆಯಿ ಪಾತೆರುವ । ಇರೆನ್ ।*
*ಗೆಣಿತ್ ಗೆಣಿತ್ತ್ ಬಳಸುವ । ಮಾಂತ ।*
*ಜನನ್ ಸೂಸೂತು ತೆಳಿಪುವ । ಆಹಾ ।*
*ಗುಣವಂತೆ ತಾನ್ಂತ್ ಹಾಂಕಾರ ಸೋಜೋಪ ।*
*ಉಣುಗುಂಡಲ ಕೈ ಮಿಣಿಮಿಣಿ ಸೂಪ ॥೪॥*
*ಕೆಲೆಂಜಿ ರಾಪುಣು ಇರೆತೊ ಮಿತ್ತ್ । ನನ ।*
*ಬಳೆಸುಣೊ ಬುಡ್ ಆನ್ ಮಸ್ತ್ । ಬಂಜಿದ ।*
*ಒಳೆಯಿ ಮಗ್ತಾರುಣು ಪಿತ್ತ್ । ಆಹಾ ।*
*ಜಲಜನಾಭೆ ಲಕ್ಷ್ಮೀನಾರಾಯಣೆ ನಂಕ್ ।*
*ಒಲಿಪಿ ಉಪಾಯನ್ ನೆಲೆಮಂತ್ ಸೂವೊಡು॥೫॥*

ತುಳು ಬಲ್ಲವರು ಈ ಹಾಡನ್ನು ಕೇಳಿದರೆ ಈ ಸದಭಿರುಚಿಯ' (ಅಂದರೆ ತಮ್ಮ ಹೊಸ ನೆಂಟರನ್ನೇ ಹಾಸ್ಯಕ್ಕಾಗಿ ನಿಂದಿಸುವ) ಹೀಯಾಳಿಕೆಯ ಸೊಗಸನ್ನು ಅರಿತು ಖುಷಿ ಪಡುವರು. ಆ ಕಾಲದಲ್ಲಿ ಹೀಗೆ ಗಂಡಿನ ಕಡೆಯುವರನ್ನು ಹೆಣ್ಣಿನ ಕಡೆಯುವರೂ, ಹೆಣ್ಣಿನ ಕಡೆಯುವರನ್ನು ಗಂಡಿನ ಕಡೆಯುವರೂ ನಿಂದಿಸುತ್ತಾ ಆಶುಕವಿತೆಗಳನ್ನು ರಚಿಸಿ ಹಾಡುತ್ತಿದ್ದರು. ಇದರಿಂದಾಗಿ ಎರಡೂ ಕಡೆಯುವರು ಆಶುಕವಿತ್ವ ಉಳ್ಳವರನ್ನು ಹುಡುಕಿ ತಮ್ಮ ಕಡೆಯಲ್ಲಿ ನಿಂದಾಸ್ಪರ್ಧೆಯಲ್ಲಿ ಭಾಗವಹಿಸಲು ಕರೆದುಕೊಂಡು ಹೋಗುತ್ತಿದ್ದರು. ತಮ್ಮ ಸಂಬಂಧಿಕರ ಒತ್ತಾಯಕ್ಕಾಗಿ ಪಾವಂಜೆ ಹರಿದಾಸರೂ ಸಾಕಷ್ಟು ದೂರುವ ಹಾಡುಗಳನ್ನು ರಚಿಸಿಕೊಟ್ಟಿದ್ದಾರೆ.

ಹರಿದಾಸರ ಹಾಸ್ಯ ಪ್ರವೃತ್ತಿಯಂತೆಯೇ ರಸಿಕತನವನ್ನು ಸೂಚಿಸುವ ಪದ್ಯಗಳೂ ಸಾಕಷ್ಟಿವೆ. ಪ್ರೀತಿ ಉಕ್ಕುವುದು ನಿನ್ನ ನೋಡುವಾಗ । ಪ್ರತಿಕ್ಷಣವು ನಿನ್ನ । ನೂತನದ ಮಾತು ಕೇಳುವಾಗ ॥ ಯಾವ ಹುಡುಗಿಗೂ ನಿನ್ನ । ರೀತಿ ಬಾರದು ನೋಡ ॥ ಜಾತಿ ನಾಯಕಿ ನಿನಗೆ । ಸೋತು ಹೋಗಿದೆ ಮನವು ॥ 1 ॥ ಗಾಜಿನ ಬುರುಡೆಯಂತಿಹ ಮೊಲೆ । ಕಾಜಿ – ಎಡೆ ಬಳೆಯಿಟ್ಟ ಕೈಯ ಬೆಡಗನೋಡಿ ॥ – ಹೀಗೆ ಪ್ರಾರಂಭವಾಗುವ ತುಳು ಪದ್ಯವೊಂದರಲ್ಲಿ ಅವರು ನಲ್ಲೆಯನ್ನುದ್ದೇಶಿಸಿ ಪ್ರೇಮಗೀತೆ ಹಾಡಿದ್ದಾರೆ. ಅದರ ಕೆಲವು ಸಾಲುಗಳು –

*ಪ್ರೀತಿಯಾಪುಣು ಇನನ್ ಸೂನಗ । ಏಪೊಲ ಇನ್ನೊ।*
*ನೂತನಂತೊ ಪಾತೆರ ಕೇಣ್ಣಗ ॥*
*ಏತ್ ಜೇವುಳೆಗ್ಲಾ ಇನ್ನೊ।*
*ರೀತಿ ಬರನ್ ಸೂವರೆ ಪೋಂಡ॥*
*ಜಾತಿ ನಾಯಕಿ ಇನನ್।*
*ಸೂತು ಮನಸ್ ಸೋತು ಪೋನು॥ ॥೧॥*
*ಗಾಜಿದೊ ಬುರುಡೆದೊ ರೀತಿ । ಸೋಜುಣು ಮಿರೆ ಕೈತೊ ।*
*ಕಾಜಿ ಎಡಕಾಜಿ ಜೀತ್ನೊ ಸಾಜ ಸೂವರೆ ॥*
*ಮಾಜಿ ಪೋವನ್ ಇನ್ನೊ ಮೋಣೆದೊ ।*
*ತೇಜ ಚಂದ್ರನ್ ಮಿಕ್ಕುತುಂಡು ॥*
*ತಾಜ ಪುತ್ತೊಳಿ ಬೊಂಬೆ ಇನಟ ।*
*ಮೋಜು ಮಂಪೊಡಿನ್ನಾಜೆ ಎಂಕ್ ॥*

ಹೀಗೆ ಒಂದು ಜನಾಂಗಕ್ಕೆ ಭಕ್ತಿ ಮಾರ್ಗವನ್ನು ತೋರಿಸಿ, ಸುಸಂಸ್ಕೃತ ಬದುಕಿನ ದೀಕ್ಷೆಯನ್ನು ನೀಡಿದ ಪಾವಂಜೆ ಹರಿದಾಸ ನಾರ್ಣಪ್ಪಯ್ಯನವರು ನಮ್ಮ ಮರೆಯುಬಾರದ ಕವಿಗಳಲ್ಲೊಬ್ಬರು. ಆಧುನಿಕ ಕವಿತೆಗಳ ಮಾದರಿಯನ್ನೂ ಅವರಲ್ಲಿ ಕಾಣಬಹುದು. ನಾನು ದಕ್ಷಿಣ ಕನ್ನಡದ ಶತಮಾನದ ಕಾವ್ಯ' (1900–2000) ಸಂಪುಟದಲ್ಲಿ ಸೇರಿಸಿಕೊಂಡಿರುವ ಅವರ ಕವಿತೆ ಹೀಗಿದೆ:

*ಓಡದಿರು ಓಡದಿರು ಖೋಡಿ ಮನವೆ ।*
*ಮೂಢತನದಲಿ ಬರುವ ಕೇಡುಗಳನರಿದರಿದು ॥ಪಲ್ಲ॥*
*ಬೀಸುವದು ಬಿರುಗಾಳಿ । ಸೂಸುವದು ಉರಿಮಳೆಯು ।*
*ನೇಸರಿಲ್ಲದೆ ಕತ್ತಲೆಯು ಮುಸುಕುತಿಹುದು ॥*
*ಈಸು ನೆಲಸಿಹ ಘೋರ । ಭೀಷಣಾಟವಿಯೊಳಗೆ ।*
*ಬೀಸುವನು ಬೇಡನೊಬ್ಬನು ಬಲೆಯನಿದಕೊ ॥*
*ಅತ್ತೆಯೆಂಬವಳು ನಿನ್ನ । ನೆತ್ತಿಯಲಿ ತೈಲವನು ।*
*ಒತ್ತಿ ಮೋಹದಿ ವಹಿಸಿಕೊಂಡಿರುವಳು ॥*
*ಅತ್ತಕಡೆ ಬೇಡ ಹಿಂ । ದೊತ್ತಿ ಬರುವರೆ ಬೇಗ ।*
*ತುತ್ತಾಗು ಎನುತ ಬಾಯ್ ತೆರೆದಿರುವಳು ॥*
*ಮುಂಗಡೆಯೊಳ್ ಸಾಲಾಗಿ । ಅಂಗಡಿಗಳಿರುತಿಹವು ।*
*ಹಂಗಿಗನು ನೀನಾಗಬೇಡ ಅವರ ।*
*ಸಂಗ ಗೈಯುತ ವ್ಯಾಪಾ । ರಂಗಳನು ಮಾಡಿದರೆ ।*
*ಭಂಗಿಯನು ಕೊಟ್ಟು ಬಲು ಭಂಗಪಡಿಸುವರಯ್ಯ ॥*
*ಈ ರೀತಿಯಲಿ ನಿನಗೆ ಸಾರಿಪೇಳಿದೆ ನೋಡು ।*
*ಭೂರಿ ಮಾಯಾ ಭ್ರಾಂತಿಗೊಳಗಾಗದೆ ॥*
*ಕಾರಣಿಕ ಲಕ್ಷ್ಮೀನಾರಾಯಣನ ಪಾದ – ।*
*ವಾರಿಜದಿ ನಲಿದು ಸುಖಿಯಾಗು ನೀ ಮನವೆ ॥*

**ಹಾಡುಗಳ ಸಂಗ್ರಹದ ಚರಿತ್ರೆ**

ಪಾವಂಜೆ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯ ಅವರು ಸಂಸ್ಕೃತ, ಕನ್ನಡ, ಕೊಂಕಣಿ ಮತ್ತು ತುಳು – ಈ ನಾಲ್ಕೂ ಭಾಷೆಗಳಲ್ಲಿ ಕವಿತ್ವ ಸಾಮರ್ಥ್ಯ ಇದ್ದ ಅತ್ಯಪೂರ್ವ ಬಹುಭಾಷಾ ಕವಿ. ಅವರು ಸ್ವತಃ ತಮ್ಮ ಕೀರ್ತನೆಗಳನ್ನು ಬರೆದಿಡಲಿಲ್ಲ. ಅವರು ಆಶುಕವಿ, ಮನಸ್ಸಿನಲ್ಲಿ ವಿಶೇಷವಾದ ಭಾವಾವೇಶ ಉಂಟಾದಾಗ ಅವರ ಬಾಯಿಯಿಂದ ಹಾಡುಗಳು ರಾಗಬದ್ಧವಾಗಿ, ಛಂದೋಬದ್ಧವಾಗಿ ಹರಿದು ಬರುತ್ತಿದ್ದವು. ಅಲ್ಲಿದ್ದ ಯಾರಾದರೂ ಆಗಲೇ ಅಥವಾ ಆಮೇಲೆ ಉಳಿದವರ ಸಹಾಯದಿಂದ ಅವುಗಳನ್ನು ದಾಖಲು ಮಾಡುತ್ತಿದ್ದರು. ಬಹುಶಃ ಮನಸ್ಸಾದರೆ ಹರಿದಾಸರೂ ಅವುಗಳ ಪಠ್ಯೀಕರಣಕ್ಕೆ ಸಹಕರಿಸುತ್ತಿದ್ದಿರಬಹುದು. ಅವರ ಜೀವಿತ ಕಾಲದಲ್ಲಿ ಜನರಿಗೆ ಕೀರ್ತನೆಗಳನ್ನು ಕೇಳಿ ಬರೆದಿಟ್ಟುಕೊಳ್ಳುವ ಹವ್ಯಾಸವಿತ್ತು. ಮನೆಮನೆಗಳಲ್ಲಿ ಭಜನೆ ನಡೆಯುತ್ತಿದ್ದ ಕಾಲ ಅದು. ಮುದ್ರಿತ ಭಜನಾ ಪುಸ್ತಕಗಳಿಗೂ ಬೇಡಿಕೆಯಿತ್ತು. ಇಂತಹ ಕಾಲದಲ್ಲಿ ಜನರ ಆಸಕ್ತಿಯಿಂದಾಗಿ ಬಹುಪಾಲು ಹಾಡುಗಳು ಉಳಿದಿವೆ ಎಂದು ನಂಬಬಹುದು. ಹರಿದಾಸರು ಜನಪ್ರಿಯರಾದ ಮೇಲೆ, ಅಂದರೆ 1910 ರ ದಶಕದಿಂದ 1920 ರ ದಶಕದವರೆಗೆ ಅವರಿಂದಲೇ ಕೆಲವು ಸಮಾಜ ಬಾಂಧವರು ಅವರ ಹಾಡುಗಳನ್ನು ಬರೆದಿಟ್ಟುಕೊಂಡಿದ್ದರು. ಅವರಿಗೆ ಇಷ್ಟವಾದ ಪತ್ರೊಡೆ ಇತ್ಯಾದಿ ವಿಶೇಷದ ಖಾದ್ಯಗಳನ್ನು ತಯಾರಿಸಿ, ಅವರನ್ನು ಊಟಕ್ಕೆ ಕರೆದು ಉಪಚರಿಸಿ, ಅವರನ್ನು ಸಂತೋಷ ಪಡಿಸಿ ಅವರಿಂದ ಪದ್ಯಗಳನ್ನು ಕೇಳಿ ಬರೆದಿಟ್ಟುಕೊಳ್ಳುತ್ತಿದ್ದರಂತೆ. ಅವರ ಹಾಡುಗಳು ಸಂಗ್ರಹಗೊಂಡು ಮುದ್ರಿತವಾಗಿ ನಮ್ಮ ಕಾಲದವರೆಗೆ ಉಳಿದು ಬಂದ ಕಥೆಯನ್ನು ಸಂಕ್ಷಿಪ್ತವಾಗಿ ಕೆಳಗಿನ ಪ್ರಕಟಣ ವಿವರಗಳಲ್ಲಿ ತಿಳಿಯಬಹುದು:

1. ಪಾವಂಜೆ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯನವರಿಂದ ವಿರಚಿತ ಕಾರ್ಕಳ ದೀಪೋತ್ಸವ ಪದಗಳು. ಸಂಗ್ರಾಹಕರು: ಕೆ.ಪಿ. ಕಾಮತ್. ಮಾರುತಿ ಮುದ್ರಾಣಾಲಯ, ಕಾರ್ಕಳ . 1922. ಬೆಲೆ ರೂ. 0–6–0
2. ಶ್ರೀ ಹರಿಕೀರ್ತನಾವಳಿ. ಸಂಗ್ರಾಹಕರು: ಬಿ. ಕೃಷ್ಣ ಪ್ರಭು. ವಿಕ್ಟೋರಿಯಾ ಮುದ್ರಾಶಾಲೆ ಬಂಟ್ವಾಳ, ದಕ್ಷಿಣ ಕನ್ನಡ. 64 ಪುಟಗಳು. 5–1–1926
3. ಹರಿದಾಸರ ಕೀರ್ತನೆಗಳು. ಸಂಗ್ರಾಹಕರು: ಕೆ. ವೆಂಕಟಾಚಾರ್ಯ. ಒಂದಾಣೆ ಮಾಲೆ (175), ಪ್ರಭಾತ ಆಫೀಸು ರಥಬೀದಿ, ಮಂಗಳೂರು–1. 1958
4. ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯನವರ ಜೀವನ ಚರಿತ್ರೆ ಮತ್ತು ಕೆಲವು ಭಜನಾ ಗೀತೆಗಳು. ಬೆಳ್ಳೆ ಭುಜಂಗ ರಾವ್, ಬಿ.ಎ. ಒಂದಾಣೆ ಮಾಲೆ(206), ಪ್ರಭಾತ ಆಫೀಸು ರಥಬೀದಿ, ಮಂಗಳೂರು–1. 1958
5. ಹರಿದಾಸರ ಕೀರ್ತನೆಗಳು. ಭಾಗ–1. ಸಂಗ್ರಾಹಕರು: ಕೆ. ವೆಂಕಟಾಚಾರ್ಯ. ಒಂದಾಣೆ ಮಾಲೆ (270), ಪ್ರಭಾತ ಆಫೀಸು ರಥಬೀದಿ, ಮಂಗಳೂರು–1. 1960
6. ಹರಿದಾಸರ ಕೀರ್ತನೆಗಳು. ಭಾಗ–2. ಸಂಗ್ರಾಹಕರು: ಕೆ. ವೆಂಕಟಾಚಾರ್ಯ. ಒಂದಾಣೆ ಮಾಲೆ (271), ಪ್ರಭಾತ ಆಫೀಸು ರಥಬೀದಿ, ಮಂಗಳೂರು–1. 1960


**ಡಾ. ಬಿ. ಜನಾರ್ದನ ಭಟ್**



**ಉಡುಪಿ ಜಿಲ್ಲೆಯ ಬೆಳ್ಮಣ್ಣಿನ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದು, 2019 ರಲ್ಲಿ ನಿವೃತ್ತರಾಗಿದ್ದಾರೆ'. ಕತೆ, ಕಾದಂಬರಿ, ಅನುವಾದ, ವಿಮರ್ಶೆ, ಮಕ್ಕಳ ಸಾಹಿತ್ಯ, ಸಂಪಾದಿತ ಗ್ರಂಥಗಳು ಅಲ್ಲದೇ ಉತ್ತರಾಧಿಕಾರ' , ಹಸ್ತಾಂತರ', ಮತ್ತು ಅನಿಕೇತನ' ಕಾದಂಬರಿ ತ್ರಿವಳಿ, ಮೂರು ಹೆಜ್ಜೆ ಭೂಮಿ', ಕಲ್ಲು ಕಂಬವೇರಿದ ಹುಂಬ', ಬೂಬರಾಜ ಸಾಮ್ರಾಜ್ಯ' ಮತ್ತು ಅಂತಃಪಟ' ಅವರ ಕಾದಂಬರಿಗಳು ಸೇರಿ ಜನಾರ್ದನ ಭಟ್ ಅವರ ಪ್ರಕಟಿತ ಕೃತಿಗಳ ಸಂಖ್ಯೆ 82.**



ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.**

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.

ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

7. ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯನವರ ಭಜನಾ ಗೀತೆಗಳು - ಭಾಗ 4. ಬೆಳ್ಳೆ ಭುಜಂಗ ರಾವ್, ಬಿ.ಎ. ಒಂದಾಣೆ ಮಾಲೆ(328), ಪ್ರಭಾತ ಆಫೀಸು ರಥಬೀದಿ, ಮಂಗಳೂರು- 1. 1961. (ಟಿಪ್ಪಣಿ: ಕೆ, ವೆಂಕಟಾಚಾರ್ಯರಿಂದ ಸಂಗ್ರಹಿಸಲ್ಪಟ್ಟ ಮೂರು ಕೃತಿಗಳನ್ನು ಪರಿಗಣಿಸಿ ಭಾಗ- 4' ಎಂಬ ನಿರ್ದೇಶನ ನೀಡಿರಬಹುದು. ಬೆಳ್ಳೆ ಭುಜಂಗ ರಾಯರು ಮೊದಲು ಬರೆದಿದ್ದ ಸಂಕ್ಷಿಪ್ತ ಜೀವನ ಚರಿತ್ರೆಯ ಪ್ರಾರಂಭಿಕ ಪುಟಗಳ ನಂತರ ಅದರಲ್ಲಿಯೂ ಕೆಲವು ಕೀರ್ತನೆಗಳಿದ್ದವು. ಅದನ್ನೂ ಪರಿಗಣಿಸಿದರೆ ಇದು ಹರಿದಾಸರ ಕೀರ್ತನೆಗಳ ಐದನೆಯ ಪುಸ್ತಕ - ಒಂದಾಣೆ ಮಾಲೆಯಲ್ಲಿ ಬಂದದ್ದು).

8. ಪಾವಂಜೆ ಹರಿದಾಸವಾಣಿ'. ಸಂಗ್ರಹ ಮತ್ತು ಪ್ರಕಾಶನ: ಸತ್ಸಂಗ ಸೇವಾ ಸಮಿತಿ', ಹಳೆಯಂಗಡಿ. 1978.

9. ಹರಿದಾಸ ಕೀರ್ತನ - ಪಾವಂಜೆ ಹರಿದಾಸರ ಕೃತಿ ಸಂಪುಟ. ಸಂಪಾದಕರು: ಪ್ರೊ. ಹೆರಂಜೆ ಕೃಷ್ಣ ಭಟ್ಟ ಮತ್ತು ಡಾ. ಪಾದೇಕಲ್ಲು ವಿಷ್ಣು ಭಟ್ಟ. ಎಚ್. ಕೆ. ಬಿ. ಅಭಿನಂದನಾ ಸಮಿತಿ, ಉಡುಪಿ. 2005.

10. ಖ್ಯಾತ ಹರಿದಾಸ, ಆಶುಕವಿ ಪಾವಂಜೆ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯ. ಡಾ. ಎಚ್. ದಿವಾಕರ ಭಟ್. ಕನ್ನಡ ಸಂಘ, ಕಾಂತಾವರ. 2018

ಟಿಪ್ಪಣಿ: ಪಾವಂಜೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಮಂಡಳಿಯು ಸ್ಥಾಪಿಸಿರುವ, ಪಾವಂಜೆ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯ ಸಾಂಸ್ಕೃತಿಕ ವೇದಿಕೆ'ಯು ಹರಿದಾಸರ ಹೆಸರಿನಲ್ಲಿ ಉತ್ತಮ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ವೃದ್ಧಾಪ್ಯದಲ್ಲಿರುವ ಕಲಾವಿದರನ್ನು ಗುರುತಿಸಿ ಅಂತಹವರಿಗೆ ತನ್ನಿಂದಾದ ಸಹಾಯ ಮಾಡುತ್ತಿದೆ.

ವರ್ಷಕ್ಕೆ ಒಬ್ಬರನ್ನು ವಿಶೇಷಾ ಗೌರವಧನ ಇತ್ತು ಸನ್ಮಾನಿಸುತ್ತಿದೆ. ಪಾವಂಜೆ ಹರಿದಾಸರ ಹಾಡುಗಳನ್ನು ಸಂಗ್ರಹಿಸಲು ಮೊದಲು ಮಾಡಿದವರು ಕಾರ್ಕಳದ ಕೆ.ಪಿ. ಶೆಣೈಯವರು, ಬಂಟವಾಳದ ಕೃಷ್ಣ ಪ್ರಭುಗಳು, ಸುರತ್ಕಲ್ಲಿನ ಸಂಶೋಧಕ ಕೆ. ವೆಂಕಟಾಚಾರ್ಯರು, ಮತ್ತು ಬೆಳ್ಳೆ ಭುಜಂಗರಾಯರು. ಅವರ ಕೊಂಕಣಿ ಭಜನೆಗಳು ಕಾರ್ಕಳದ ಗೌಡ ಸಾರಸ್ವತ ಸಮಾಜದ ಹಿರಿಯರ ಬಳಿ ಇದ್ದಿರುವ ಸಾಧ್ಯತೆ ಇದೆ. ಯಾರಾದರೂ ಈ ಬಗ್ಗೆ ಸಂಶೋಧನೆ ಮಾಡಿದರೆ ಅವು ಲಭ್ಯವಾದಾವು. ಹರಿದಾಸರು ಕಾರ್ಕಳವನ್ನು ಬಿಟ್ಟಮೇಲೆ ತುಳು ಭಾಷೆಯಲ್ಲಿ ಸಮಾಜಬಂಧುಗಳ ಸಂತೋಷಾರ್ಥವಾಗಿ - ಮುಖ್ಯವಾಗಿ ಹೆಂಗಸರಿಗೆ ಮದುವೆಯಲ್ಲಿ ದೂರುವ ಹಾಡುಗಳಾಗಿ ಬಳಸಲು - ಹಲವು ಸರಸ ಗೀತೆಗಳನ್ನು ರಚಿಸಿದರು. ಪ್ರಾರಂಭಿಕ ಸಂಗ್ರಹ ಕಾರ್ಯ ಮತ್ತು ದಾಖಲೀಕರಣ ಮಾಡಿ ಇಂತಹ ಗೀತೆಗಳನ್ನು ಸಂರಕ್ಷಿಸಿದ ಮೇಲೆ ಉಲ್ಲೇಖಿಸಿದ ನಾಲ್ವರು ಮಹನೀಯರು, ಒಂದಾಣೆ ಮಾಲೆಯ ಕುಡ್ವ ವಾಸುದೇವ ಶೆಣೈಯವರು ಮತ್ತು ಹಳೆಯಂಗಡಿಯ ಸತ್ಸಂಗ ಸಮಿತಿಯವರ ಪ್ರಯತ್ನದಿಂದ ಒಬ್ಬರು ದಾಸಪಂಥದ ಒಬ್ಬರು ಮಹತ್ವದ ಕವಿಯ ರಚನೆಗಳು ನಮಗೆ ಇಂದು ಲಭಿಸುತ್ತಿವೆ. ಈ ಶತಮಾನದಲ್ಲಿ ಅವರ ಇನ್ನಷ್ಟು ಕೃತಿಗಳನ್ನು ಸಂಗ್ರಹಿಸಲಾಗಿದೆ. ಪ್ರೊ. ಹೆರಂಜೆ ಕೃಷ್ಣ ಭಟ್ಟ, ಡಾ. ಪಾದೆಕಲ್ಲು ವಿಷ್ಣು ಭಟ್ಟ ಮತ್ತು ಡಾ. ಯಾಜಿ ದಿವಾಕರ ಭಟ್ಟರ ಕೊಡುಗೆಯನ್ನೂ ಸ್ಮರಿಸಬೇಕಾಗುತ್ತದೆ.

## ಮಣಿಪಾಲ ಲೈಫ್ ಸೈನ್ಸ್ ವಿಭಾಗದ ಡೈರೆಕ್ಟರ್ ಆಗಿ ಪ್ರೊ| ಸತೀಶ್ ರಾವ್ ಬಿ.ಎಸ್.



ಪರ್ಕಳದಲ್ಲಿ ವಾಸವಾಗಿರುವ ಡಾ. ಸತೀಶ್ ರಾವ್ ಬಿ.ಎಸ್‌ರವರು ಮಣಿಪಾಲದ ಕೆ.ಎಂ.ಸಿ.ಯಲ್ಲಿ ರೇಡಿಯೇಷನ್ ಬಯೋಲಜಿಯಲ್ಲಿ ಪ್ರೊಫೆಸರ್ ಆಗಿದ್ದು ಪ್ರಸ್ತುತ ರಿಸರ್ಚ್ ಮಾಹೆಯಲ್ಲಿ ಡೈರೆಕ್ಟರ್ ಆಗಿದ್ದಾರೆ. ಇವರು ಜೂನ್ 1 ರಿಂದ ಮಣಿಪಾಲ ಲೈಫ್ ಸೈನ್ಸ್ ವಿಭಾಗದ ಹೆಚ್ಚುವರಿ ಜವಾಬ್ದಾರಿಯ ಹುದ್ದೆಯಲ್ಲಿ ಡೈರೆಕ್ಟರ್ ಆಗಿ ನೇಮಕಗೊಂಡಿದ್ದಾರೆ. 1987ರಲ್ಲಿ ಶ್ರೀಯುತರು ಮೈಸೂರು ಯೂನಿವರ್ಸಿಟಿಯ M.Sc ಪದವಿಯಲ್ಲಿ ಚಿನ್ನದ ಪದಕ ಪಡೆದು ಮಣಿಪಾಲ ಕೆ.ಎಂ.ಸಿ ಯಲ್ಲಿ ರೇಡಿಯೊ ಬಯೋಲಜಿಯಲ್ಲಿ ಪಿ.ಎಚ್.ಡಿ. ಮಾಡಿ 1993ರಲ್ಲಿ ಸೇವೆಯನ್ನು ಆರಂಭಿಸಿದರು. ಡಾ. ಸತೀಶರವರು 140 ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದು ದೇಶ ವಿದೇಶಗಳಲ್ಲಿ ನಡೆದ ಹಲವಾರು ಸಂಶೋಧನಾ ಕಾರ್ಯಗಳಲ್ಲಿ ತನ್ನ ವಿಷಯವನ್ನು ಮಂಡಿಸಿದ್ದರು. ಅವರು ಪತ್ನಿ ಶಿಕ್ಷಕಿ ಶ್ರೀಮತಿ ಜಯಂತಿ ಹಾಗೂ ಇಬ್ಬರು ಪುತ್ರರನ್ನು ಪಡೆದಿದ್ದಾರೆ. ಅವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಚಂದ್ರಕುಮಾರ್ ಇವರಿಗೆ ಪದೋನ್ನತಿ



ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ವಿದ್ಯಾ ಸಂಸ್ಥೆ ಪುತ್ತೂರು ವಿವೇಕಾನಂದ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಾಗಿ ಚಂದ್ರ ಕುಮಾರ್ ಬಾರ್ಕೂರು ಅಧಿಕಾರ ಸ್ವೀಕರಿಸಿದ್ದಾರೆ. ಇವರು ಬಾರ್ಕೂರು ಮಸ್ಕಿಬೈಲ್ ದಿ.ಲಕ್ಷ್ಮೀನಾರಾಯಣಯ್ಯನವರ ಸುಪುತ್ರರಾಗಿದ್ದಾರೆ. ಅವರಿಗೆ ಶ್ರೀಶಾರದಾ ಅಭಿನಂದನೆಗಳು.

## ಆಲಂಪಾಡಿ ಸುಕುಮಾರ್ ಶ್ಯಾನುಭಾಗ್ ಅವರಿಗೆ ಅಭಿನಂದನೆ



ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಅರವಿಂದಕುಮಾರ್ ದಂಪತಿಗಳು ತಮ್ಮ ಮಗಳ ಮದುವೆಯ ಸಂದರ್ಭ ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷರು, ಜ್ಯೋತಿಷ್ಯ ಶಾಸ್ತ್ರದ ಬಗ್ಗೆ ಆಳವಾದ ಅಭ್ಯಾಸವನ್ನು ಮಾಡಿರುವ, ಹಲವಾರು ಪುಸ್ತಕಗಳನ್ನು ಬರೆದಿದ್ದ, ಕಾಸರಗೋಡು ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಕಾರ್ಯದರ್ಶಿಯಾಗಿ ದುಡಿದಿರುವ ಆಲಂಪಾಡಿ ಸುಕುಮಾರ್ ಶ್ಯಾನುಭಾಗ್‌ರವರನ್ನು ಗೌರವಿಸುವ ಕಾರ್ಯಕ್ರಮ ವನ್ನು ನೆರವೇರಿಸಿದ್ದರು. ಶ್ರೀಮತಿ ಮಮತಾ ಹರೀಶ್ ರಾವ್‌ರವರು ಶ್ರೀಯುತರ ಬಗ್ಗೆ ಪರಿಚಯಿಸಿದರು. ಚಿಟ್ಪಾಡಿ ಸದಾನಂದರಾವ್‌ರವರು ಆಲಂಪಾಡಿ ಸುಕುಮಾರ ಶ್ಯಾನುಭಾಗ್ ದಂಪತಿಗಳನ್ನು ಶಾಲು ಹೊದಿಸಿ ಫಲಪುಷ್ಪಗಳನ್ನಿತ್ತು ಸನ್ಮಾನಿಸಿದರು. ಶ್ರೀಮತಿ ಆಶಾ ಅಶೋಕ ರಾವ್, ಮೈಸೂರು ನಿರೂಪಿಸಿ ಧನ್ಯವಾದವನ್ನಿತ್ತರು. ಪುತ್ತೂರಿನ ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಶ್ರೀನಿವಾಸ್, ಮೈಸೂರಿನ ಎಂ.ಆರ್.ವೆಂಕಟೇಶ್, ಸ್ವರ್ಣಲತಾ ಸದಾನಂದ ರಾವ್ ಇಲಂತೂರು ಹಾಗೂ ಬಂಧುಬಾಂಧವರು ಉಪಸ್ಥಿತರಿದ್ದರು.

## ಕವನಗಳು

### ಚಿತ್ತ

ಚಿತ್ತದಲ್ಲಿ ಒಟ್ಟಾಗುವ ಕಸಗಳನ್ನೆಲ್ಲ
ನಿಯಮಿತವಾಗಿ ಸ್ವಚ್ಛಗೊಳಿಸಿ
ಹೊರಹಾಕದೇ ಹುಟ್ಟಲಾರದು
ಸಕಾರಾತ್ಮಕ ಚಿಂತನೆಗಳ ಬೆಳಕು
ಬದುಕು ಬದಲಿಸಬಲ್ಲ ಹೊಳಹು

### ಭೇಟಿ

ಮೊದಲ ಬಾರಿಯ ಭೇಟಿಯಾಗಲಿ
ಅದೆಷ್ಟೇ ಸಾರಿ ಮುಖಾಮುಖಿಯಾಗಲಿ
ನಮ್ಮ ಸೌಜನ್ಯಯುತ ನಡೆ ನುಡಿಗಳು
ಹೃದಯಗಳನ್ನು ಗೆಲ್ಲಲು ರಹದಾರಿ.

**** ****

### ಪಾತ್ರ

ಯಾರ ಬದುಕಿನಲ್ಲಿ ನಮ್ಮದ್ಯಾವ ಪಾತ್ರವೋ
ಬಲ್ಲವರು ಯಾರು...!?
ಕೆಲವರ ಬಾಳಿನಲ್ಲಿ ನಮಗರಿಯದೇ ಪ್ರೇರಣೆಯ ಸೆಲೆ ನಾವಾಗಿರಬಹುದು...
ಮತ್ತೆ ಹಲವರಿಂದ ನಾವು ಸ್ಫೂರ್ತಿ ಪಡೆದುಕೊಳ್ಳಬಹುದು...
ಪ್ರತಿಫಲಾಪೇಕ್ಷೆಯಿಲ್ಲದೇ ಮಾಡಿದ ಚಿಕ್ಕದೊಂದು
ಸಹಾಯ ಬದುಕು ಉಳಿಸಿರಬಹುದು...
ಈ ಜೀವನವೆಂಬ ಅದ್ಭುತ ನಾಟಕರಂಗದಲ್ಲಿ ಪಾತ್ರಧಾರಿಗಳು ನಾವಾಗಿರುವಾಗ
ಸದಾ ಅತ್ಯುತ್ತಮ ಸಾಮರ್ಥ್ಯವನ್ನು ಹೊರಗೆಡವಿ
ನಮ್ಮನ್ನು ಸಾಬೀತುಪಡಿಸೋಣ.

**** ****

### ಕಿಡಿ

ಸಣ್ಣ ಕಿಡಿಯೊಂದು ಕ್ಷಣಮಾತ್ರದಲ್ಲಿ ಧಗಧಗನೇ ಉರಿಯುವ ಬೆಂಕಿಯಾಗಿ ಸರ್ವನಾಶ
ಗೈದು ಎಲ್ಲವನ್ನೂ ಬೂದಿಯಾಗಿಸುವಂತೆ
ಎದೆಯೊಳಗೆ ಹುಟ್ಟಿದ ಪುಟ್ಟ ಅಸಮಾಧಾನವೊಂದು
ಸುಡುವ ಕಡು ದ್ವೇಷದ ಅನಲನಾಗಲು ಹೆಚ್ಚು ಸಮಯ ಬೇಕಾಗದು
ನಮ್ಮೊಳಗೆ ಉರಿಯುವ ಭಾವ ವಿಕಾರಗಳನ್ನು ನಿಚ್ಚಳವಾಗಿ ಅರಿತು ಸಕಾಲದಲ್ಲಿ ವಿವೇಕದ
ಮಳೆ ಸುರಿಸಿ ಆರಿಸೋಣ.

- ರಶ್ಮಿ ರಾವ್, ಹೊರಮಾವು, ಬೆಂಗಳೂರು


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

*With Best Complimemts From*
SRI M. SHAILESH RAO B.E., Civil
Ph : 9448624324
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

## ವೈವಾಹಿಕ ಜೀವನದ ಸುವರ್ಣ ಸಂಭ್ರಮ




**ಶ್ರೀ ಬಿ. ಜನಾರ್ದನ ರಾವ್
ಹಾಗೂ ಶ್ರೀಮತಿ ಸಾಧನಾ ಜೆ.ರಾವ್**

ತಾ.22.05.2022ರಂದು ಉಡುಪಿ ಕುಂಜಿಬೆಟ್ಟಿನ
ಶ್ರೀ ಶಾರದಾ ಮಂಟಪದ ಜ್ಞಾನ ಮಂದಿರದಲ್ಲಿ ತಮ್ಮ
ವೈವಾಹಿಕ ಜೀವನದ ಸುವರ್ಣ ಸಂಭ್ರಮವನ್ನು ಆಚರಿಸಿಕೊಂಡ
ನಮ್ಮ ಮಾತಾ ಪಿತರಿಗೆ ಶುಭ ಕೋರುವ

ಶ್ರೀ ಅಶ್ವಿನಿ ಕುಮಾರ್ ಜೆ. ರಾವ್
ಮತ್ತು ಶ್ರೀಮತಿ ಪ್ರಿಯಾ ಎ.ರಾವ್
ಅದ್ವೈತ್ ಎ.ರಾವ್,
ಆರ್ಯಮಾನ್ ಎ.ರಾವ್

ಶ್ರೀ ಅಮಿತ್ ಜೆ. ರಾವ್ ಮತ್ತು
ಶ್ರೀಮತಿ ಅಮಿತಾ ಎ.ರಾವ್
ಮನಸ್ವಿ ಎ.ರಾವ್

## ನೂತನ ವಧೂವರರಿಗೆ ಅಭಿನಂದನೆಗಳು



**ಚಿ| ಚೇತನ್ ರಾವ್ ಯು. ಹಾಗೂ ಚಿ| ಸೌ| ಮೃಣಾಲಿನಿ ರಾವ್**

ತಾ.06.06.2022ನೇ ಸೋಮವಾರ ಕೊಡವೂರಿನ
"ವಿಪ್ರಶ್ರೀ ಕಲಾಭವನ"ದಲ್ಲಿ ಜರುಗಿದ ವಿವಾಹ ಮಹೋತ್ಸವಕ್ಕೆ
ಆಗಮಿಸಿ, ನೂತನ ವಧೂವರರಿಗೆ ಶುಭ ಹಾರೈಸಿದ ತಮಗೆಲ್ಲರಿಗೂ

ಶುಭ ಕೋರುವ

ಶ್ರೀಮತಿ ಉಮಾ ಎಸ್.ರಾವ್ ಮತ್ತು ಶ್ರೀ ಸರ್ವೋತ್ತಮ ರಾವ್ ಯು., ಮಂಗಳೂರು
ಶ್ರೀಮತಿ ಸಂಪತಿ ಮತ್ತು ಶ್ರೀ ಗುರುರಾಜ ರಾವ್, ಕೊಡವೂರು
ಶ್ರೀಮತಿ ಪಿ. ಯಶೋದಾ ರಾವ್ ಮತ್ತು ಶ್ರೀ ಪಿ. ಮೋಹನ್ ರಾವ್, ಕೊಡವೂರು
ಶ್ರೀಮತಿ ರಜನಿ ಮತ್ತು ಶ್ರೀ ಕಾರ್ತಿಕ್ ರಾವ್, ಮುಂಬೈ
ಶ್ರೀಮತಿ ಮತ್ತು ಶ್ರೀ ವಿಶ್ವನಾಥ ರಾವ್ ಮತ್ತು ಕುಟುಂಬಿಕರು
ಶ್ರೀಮತಿ ಯಶೋದಾ ಎನ್.ರಾವ್ ಮತ್ತು ಶ್ರೀ ಯು. ನಾರಾಯಣ ರಾವ್, ಚೆನ್ನೈ
ಶ್ರೀಮತಿ ಚೈತ್ರ ಎಸ್ ಮತ್ತು ಶ್ರೀ ಶಿವಪ್ರಸಾದ್ ಹೆಬ್ಬಾರ್ ಹಾಗೂ ಅವನಿ ಎಸ್, ಕಬ್ಬಿನಾಲೆ
ಶ್ರೀಮತಿ ಇಂದಿರಾ ಎನ್.ರಾವ್ ಮತ್ತು ಶ್ರೀ ನಾಗೇಂದ್ರ ರಾವ್ ಯು., ಮಂಗಳೂರು
ಶ್ರೀಮತಿ ಸುಲೋಚನಾ ಕೊಪ್ಪಲ್ ಮತ್ತು ಶ್ರೀ ವಿಜಯಕುಮಾರ್ ಕೊಪ್ಪಲ್, ಪುತ್ತೂರು
ಶ್ರೀಮತಿ ಶಾರದಾ ಎ.ರಾವ್., ಬೆಂಗಳೂರು

## ನೂತನ ವಧೂವರರಿಗೆ ಅಭಿನಂದನೆಗಳು



**ಚಿ| ಮಂಜುನಾಥ ರಾವ್ ಹಾಗೂ ಚಿ| ಸೌ| ರೂಪಶ್ರೀ**

ತಾ.21.04.2022 ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟ
ನೂತನ ವಧೂವರರಿಗೆ ಶುಭ ಕೋರುವ

ಶ್ರೀಮತಿ ಜಯಲಕ್ಷ್ಮೀ ಮತ್ತು ಕುಂಜಾರುಗಿರಿ ಶ್ರೀ ನರಸಿಂಹರಾವ್, ದೊಡ್ಡಣ ಗುಡ್ಡೆ
ಶ್ರೀಮತಿ ವಿಮಲ ಮತ್ತು ಶ್ರೀ ಕುಂಜಾರುಗಿರಿ ವಾಮನ ರಾವ್, ಕೊರೆಗಾಂವ್
ಶ್ರೀಮತಿ ಲೀಲಾ ವಿ.ರಾವ್, ಮುಂಬೈ
ಶ್ರೀಮತಿ ಶುಭ ಶಿವಪ್ರಸಾದ ರಾವ್ ಮತ್ತು ಶಿವಪ್ರಸಾದ್ ರಾವ್, ಬೆಂಗಳೂರು
ಕುಮಾರಿ ಅವ್ನಿ ಮತ್ತು ಕುಮಾರಿ ಅನ್ವಿರಾವ್, ಬೆಂಗಳೂರು
ಶ್ರೀಮತಿ ಹರಿಣಾಕ್ಷಿ ಮತ್ತು ಮುದರಂಗಡಿ ಶ್ರೀ ಶ್ರೀಧರ ರಾವ್, ಮಂಗಳೂರು
ಶ್ರೀಮತಿ ಶರಣ್ಯ ವಿ. ಮತ್ತು ರಾಘವೇಂದ್ರ ರಾವ್, ಬೆಂಗಳೂರು.

## ವೈವಾಹಿಕ ದಶಮಾನೋತ್ಸವ ಅಭಿನಂದನೆಗಳು



**ಶ್ರೀ ಶಿವಪ್ರಸಾದ್ ರಾವ್ ಹಾಗೂ ಶ್ರೀಮತಿ ಶುಭಾ**

ಮದುವೆಯ ದಶಮಾನೋತ್ಸವದ ಈ ಶುಭ ಸಂದರ್ಭದಲ್ಲಿರುವ
ಶ್ರೀದೇವರು ನಿಮಗೆ ಅಷ್ಟೈಶ್ವರ್ಯ,
ಆಯುಷ್ಯ ಮತ್ತು ಆರೋಗ್ಯ ಕರುಣಿಸಲಿ ಎಂದು ಪ್ರಾರ್ಥಿಸುವ

ಶ್ರೀಮತಿ ಜಯಲಕ್ಷ್ಮೀ ಮತ್ತು ಕುಂಜಾರುಗಿರಿ ನರಸಿಂಹರಾವ್ ದೊಡ್ಡಣಗುಡ್ಡೆ
ಶ್ರೀಮತಿ ರೂಪ ಮತ್ತು ಮಂಜುನಾಥ ರಾವ್ ಬೆಂಗಳೂರು



## ಡಿಸ್ಕಸ್ ತ್ರೋ ಸ್ಪರ್ಧೆ : ಪ್ರಥಮ

ಭಾರತದ ಮಾಸ್ಟರ್ಸ್ ಗೇಮ್ಸ್ ಫೆಡರೇಷನ್ ವತಿಯಿಂದ ಕೇರಳದ ತಿರುವನಂತಪುರದಲ್ಲಿ ಮೇ 18 ರಿಂದ 22 ರವರೆಗೆ ನಡೆದ 4 ನೇ ಹಿರಿಯರ ರಾಷ್ಟ್ರೀಯ ಕ್ರೀಡಾ ಕೂಟದ 75 ವರ್ಷ ವಯೋ ಮಾನದ ಡಿಸ್ಕಸ್ ತ್ರೋ ಸ್ಪರ್ಧೆಯಲ್ಲಿ ನಮ್ಮ ಸಮಾಜದವರಾದ ಕಬ್ಬಿನಾಲೆ ತಿಂಗಳಮಕ್ಕಿಯ ವೈ. ಕುಮಾರಸ್ವಾಮಿ ಪ್ರಥಮ ಸ್ಥಾನ ಪಡೆದಿದ್ದಾರೆ. ಅವರು ಕ್ರೀಡಾಕೂಟದ 400 ಮೀ. ಓಟ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಇವರಿಗೆ ಶ್ರೀಶಾರದಾ ಅಭಿನಂದನೆ.


## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ

**ಜ್ಞಾನಶಕ್ತಿ ನಗರ, ಕೊಡಿಗೆಹಳ್ಳಿ, ಬೆಂಗಳೂರು**

*ಶೃಂಗೇರಿ ಶ್ರೀಮದ್ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ಪರಮಾನುಗ್ರಹ ಪುರಸ್ಕರ ಆಶೀರ್ವಾದಗಳಿಂದ*

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ 1944ನೇ ಶುಭಕೃತ್ ನಾಮ ಸಂವತ್ಸರದ ಜೇಷ್ಠ ಮಾಸ ಕೃಷ್ಣ ಪಾಡ್ಯದಿಂದ ಷಷ್ಠಿವರೆಗೆ

**ತಾ.15.06.2022 ಬುಧವಾರದಿಂದ ತಾ.19.06.2022 ರವಿವಾರದವರೆಗೆ**

**ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಬ್ರಹ್ಮಕುಂಭಾಭಿಷೇಕ ಹಾಗೂ ನವಗ್ರಹ ಪ್ರತಿಷ್ಠಾ ಮಹೋತ್ಸವಗಳು**

ಶ್ರೀ ಕ್ಷೇತ್ರದ ತಂತ್ರಿಯವರಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಸಂಪನ್ನಗೊಳ್ಳಲಿರುವುದು.

ಶ್ರೀಮದ್ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳವರು ಜ್ಯೇಷ್ಠ ಕೃಷ್ಣ ಷಷ್ಠಿ ದಿನಾಂಕ 19.06.2022 ರವಿವಾರದಂದು ಶ್ರೀ ಕ್ಷೇತ್ರಕ್ಕೆ ದಯಮಾಡಿಸಿ ತಮ್ಮ ಪವಿತ್ರ ಹಸ್ತಗಳಿಂದ ಬ್ರಹ್ಮಕುಂಭಾಭಿಷೇಕ ಹಾಗೂ ನವಗ್ರಹ ಬಿಂಬಗಳ ಪ್ರತಿಷ್ಠೆಯನ್ನು ನಡೆಸಿಕೊಡಲಿದ್ದಾರೆ.

– ಆಡಳಿತ ಮಂಡಳಿ ಹಾಗೂ ಬ್ರಹ್ಮ ಕುಂಭಾಭಿಷೇಕ ಸಮಿತಿಯ ಸರ್ವಸದಸ್ಯರು

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**"ಗೃಹ ಸಾಲ"**
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**

ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ




ಶ್ರೀ ಹರಿಹರೇಶ್ವರ ದೇವಸ್ಥಾನ. ದುರ್ಗ, ಕಾರ್ಕಳ ತಾಲೂಕು ಇವರು ರಾಮ ಭಜನಾ ಸಪ್ತಹದ ಅಂಗವಾಗಿ ನಡೆಸಲಾದ ಭಜನಾ ಸ್ಪರ್ಧೆಯಲ್ಲಿ ಶ್ರೀ ಶಾರದಾ ಭಜನಾ ಮಂಡಳಿ, ಉಡುಪಿ ಪ್ರಥಮ ಬಹುಮಾನ ಪಡೆದಿರುತ್ತಾರೆ.

## ನೂತನ ವಧೂವರರಿಗೆ ಅಭಿನಂದನೆಗಳು



**ಚಿ| ಅತುಲ ಹಾಗೂ ಚಿ| ಸೌ| ಅನುಶ್ರೀ**

ತಾ.20.05.2022ನೇ ಶುಕ್ರವಾರ ಉಡುಪಿ ಕುಂಜಿಬೆಟ್ಟಿನ "ಶ್ರೀ ಶಾರದಾ ಮಂಟಪ"ದಲ್ಲಿ ವೈವಾಹಿಕ ಜೀವನಕ್ಕೆ ಕಾಲಿರಿಸಿದ ನೂತನ ವಧೂವರರಿಗೆ ಶುಭ ಕೋರುವ

ಶ್ರೀಮತಿ ಆಶಾ ಮತ್ತು ಶ್ರೀ ಯು. ಅರವಿಂದ ಕುಮಾರ, ಉಡುಪಿ
ಶ್ರೀಮತಿ ಗಾಯತ್ರಿ ಮತ್ತು ಶ್ರೀ ಮಡಿಯಾಲ ಬಾಲಕೃಷ್ಣ ರಾವ್, ಕನ್ಯಾನ
ಶ್ರೀಮತಿ ಶೀಲಾ ಮತ್ತು ಶ್ರೀ ಶಾಂತಿನಾಥ, ಬೈಲೂರು, ಕಾರ್ಕಳ
ಶ್ರೀಮತಿ ಮತ್ತು ಶ್ರೀ ಟಿ. ದೇವರಾಜ ಶ್ಯಾನುಭಾಗ, ಬೆಂಗಳೂರು
ಶ್ರೀ ಎಂ. ಸದಾನಂದ ರಾವ್ ಮತ್ತು ಮಕ್ಕಳು, ಚಿಟ್ಪಾಡಿ, ಉಡುಪಿ
ಶ್ರೀಮತಿ ಪಲ್ಲವಿ ಮತ್ತು Ltf. Cdr. ಅನುದೀಪ್ ಕುಮಾರ್, ಉಡುಪಿ
ಮಾಸ್ಟರ್ ಅನಿರುದ್ಧ್‌ಕುಮಾರ್
ಶ್ರೀಮತಿ ಮತ್ತು ಶ್ರೀ ಅಶೋಕ್ ಕುಮಾರ್ ಮತ್ತು ಮಕ್ಕಳು, ಕಾಪು
ಶ್ರೀಮತಿ ಮತ್ತು ಶ್ರೀ ಅಶಿತ್ ಕುಮಾರ್ ಮತ್ತು ಮಕ್ಕಳು, ಪರ್ಕಳ


With Best Compliments From :

BUILDING DREAMS, ENHANCING LIVES.



NAKSHATRA — GANDHINAGAR
SOLITAIRE — HATHILL,
HABITAT ONE 54 An Urban Lifestyle — DEREBAIL
ANANTESSH — CAR STREET,

Land Trades® BUILDERS & DEVELOPERS
BUILDING TRUST, DELIVERING VALUE
MANGALURU'S LEADING REAL ESTATE COMPANY
RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in
Follow us on :


Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org